ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 23 ಜೂನ್ 3, 1984 ಬೆಲೆ ಪೈಸೆ 60

ಜೂನ್ 11 ರ ರೈತ ಸತ್ಯಾಗ್ರಹವನ್ನು ಯಶಸ್ವಿಗೊಳಿಸಿ

ನಿವೇಶನ ರಹಿತರಿಗೆ ಇರಲು ಭೂಮಿ ಒತ್ತುವರಿ ಭೂಮಿಯನ್ನು ದೃಢೀಕರಿಸಿ ರೈತರಿಗೂ, ಕೃಷಿ ಕಾರ್ಮಿಕರಿಗೂ ನಿವೇಶನರಹಿತರಿಗೂ ಕೂಡಲೇ ಪಟ್ಟಾ ಹಂಚಬೇಕೆಂದೂ, ದರಕಾಸ್ತುಗಳನ್ನು ಅಲ್ಲಿಯೇ ವಸತಿ ಇದ್ದವರಿಗೆ ಹಂಚಬೇಕೆಂದೂ, ಸರಕಾರದ ಮೇಲೆ ಒತ್ತಾಯ ತಂದು ನ್ಯಾಯ ಪಡೆಯುವ ಸಲುವಾಗಿ ಕರ್ನಾಟಕ ಪ್ರಾಂತ ರೈತ ಸಂಘ ಇದೇ ಜೂನ್ 11 ರಂದು ರಾಜ್ಯಾದ್ಯಂತ ಜಿಲ್ಲಾ ಮತ್ತು ತಾಲ್ಲೂಕ್ ಕಚೇರಿಗಳ ಮುಂದೆ 20 ಸಾವಿರಕ್ಕೂ ಮೀರಿ ರೈತರೂ, ರೈತ ಕಾರ್ಮಿಕರೂ ಸಾಮೂಹಿಕ ಸತ್ಯಾಗ್ರಹ - ಪಿಕೆಟಿಂಗ್ ಮಾಡಲು, ಜೈಲು ತುಂಬಲು ನಿರ್ಧರಿಸಿದ್ದಾರೆ. ಕರ್ನಾಟಕದ ಸಿ.ಐ.ಟಿ.ಯು ನೇತೃತ್ವದ ಕಾರ್ಮಿಕ ಸಂಘಗಳು ಈ ಚಳುವಳಿಗೆ ಸಂಪೂರ್ಣ ಬೆಂಬಲ ನೀಡಿವೆ. ಈಗಾಗಲೇ ಯೂನಿಯನ್‌ಗಳು ಸಂಪಿನ ನೋಟೀಸ್‌ಗಳನ್ನು ಕೊಟ್ಟಿವೆ. ರೈತ - ರೈತ ಕಾರ್ಮಿಕರ ಜೊತೆಯಲ್ಲಿ ಪಿಕೆಟಿಂಗ್ - ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವ ನಿರ್ಣಯವನ್ನೂ ಕೈಗೊಂಡಿವೆ.

ಹಿಂದಿನ ಕಾಂಗ್ರೆಸ್ ಸರಕಾರದಂತೆಯೇ ಈಗಿನ ಜನತಾ ಸರಕಾರವೂ ನಿವೇಶನ ರಹಿತರ, ಒತ್ತುವರಿ, ದರಕಾಸ್ತು ಭೂಮಿಗಳಲ್ಲಿ ಹಲವಾರು ವರ್ಷಗಳಿಂದ ವಾಸವಾಗಿರುವವರ ಸಮಸ್ಯೆಗಳನ್ನು ಬಗೆಹರಿಸಲು ಮುಂದೆ ಬರುತ್ತಿಲ್ಲ. ಸರಕಾರಿ ಪಡಭೂಮಿಯನ್ನೆಲ್ಲಾ ಇತ್ತೀಚೆಗೆ ಕೇಂದ್ರ ಸರಕಾರ ಅರಣ್ಯ ಬೆಳವಣಿಗೆಗಾಗಿ ಕಾದಿಟ್ಟಿದ್ದ ಕಾರಣ, ಆ ಪ್ರದೇಶದಲ್ಲಿ ವಾಸವಾಗಿರುವವರನ್ನೂ ಭೂಮಿ ಸಾಗುವಳಿ ಮಾಡುವವರನ್ನೂ ಅರಣ್ಯ ಖಾತೆಯವರು ರಾಜ್ಯ ಸರಕಾರದ ಪೋಲೀಸರ ಸಹಾಯದಿಂದ ಹೊರಗೆ ಹಾಕುತ್ತಿದ್ದಾರೆ. ಒತ್ತುವರಿ ಭೂಮಿಯಲ್ಲಿರುವ ಸಾವಿರಾರು ರೈತರೂ ಕೃಷಿ ಕಾರ್ಮಿಕರ ಕಳೆದ ಹಲವಾರು ವರ್ಷಗಳ ಚಳುವಳಿಯ ಪರಿಣಾಮವಾಗಿ, ರಾಜ್ಯ ಸರಕಾರ ಇತ್ತೀಚೆಗೆ ಒಂದು ನಿರ್ಣಯ ಕೈಗೊಂಡಿದೆ. ಆದರೆ ಆ ನಿರ್ಣಯದಿಂದ ದೊಡ್ಡ ಕಾಫಿ ತೋಟದಮಾಲಕರಿಗೂ ಭೂ ಮಾಲಿಕರಿಗೂ, ಲಾಭವಾಗುತ್ತದಲ್ಲದೆ, ಹಿಂದುಳಿದ ಕೃಷಿ ಕಾರ್ಮಿಕರಿಗೂ, ರೈತರಿಗೂ ರಕ್ಷಣೆಸಿಗುವುದಿಲ್ಲ ಭೂಮಿಯ ಹಕ್ಕು ದೊರೆಯುತ್ತಿಲ್ಲ.

ಕೇರಳ ರಾಜ್ಯದಲ್ಲಿ ಇಂಥದ್ದೆ ಸಮಸ್ಯೆಯಿದೆ. ಕರುಣಾಕರನ್ ಮಂತ್ರಿ ಮಂಡಲದಲ್ಲಿರುವ ಜೋಸೆಫ್ ಗುಂಪಿನವರು ಅರಣ್ಯ ಭೂಮಿಯಲ್ಲಿ ವಾಸ ಮಾಡುತ್ತಿರುವವರನ್ನು ಆ ಭೂಮಿಯಿಂದ ಬಿಡಿಸದೆ, ಅವರಿಗೆ ಖಾಯಂ ಹಕ್ಕುಪತ್ರ ಕೊಡಬೇಕೆಂದೂ, ಇಲ್ಲವಾದರೆ ತಮ್ಮ ಗುಂಪು ಮಂತ್ರಿ ಮಂಡಲದಿಂದ ಹೊರಗೆ ಹೋಗುವುದಾಗಿ ಬೆದರಿಕೆ ಹಾಕಿದಾಗ, ಕೇರಳ ಸರಕಾರ ಒಬ್ಬ ವಿಶೇಷ ಪ್ರತಿನಿಧಿಯನ್ನು ದೆಹಲಿಗೆ ಕಳುಹಿಸಿ, ಇಂದಿರಾಗಾಂಧಿಗೆ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಕಾಂಗ್ರೆಸ್ ಸರಕಾರ ಕೇರಳದಲ್ಲಿ ಜೀವಂತ ಉಳಿಯಬೇಕಾದರೆ ಜೋಸೆಫ್ ಗುಂಪಿನ ಬೇಡಿಕೆಯನ್ನು ಮನ್ನಿಸಲೇಬೇಕೆಂದು ಒತ್ತಾಯ ಪಡಿಸಿದ ಕಾರಣ, ಇಂದಿರಾಗಾಂಧಿಯವರ ಕೃಪಾಶೀರ್ವಾದದಿಂದ 60 ಸಾವಿರ ರೈತ ಕುಟುಂಬಗಳಿಗೆ 75 ಸಾವಿರ ಹೆಕ್ಟೇರ್ ಭೂಮಿಯ ಹಕ್ಕು ಒದಗಿಸಲಾಗಿದೆ. ತನ್ನ ಪಕ್ಷದ ಅಧಿಕಾರ ಉಳಿಸುವ ಸಲುವಾಗಿ ಇಂದಿರಾಗಾಂಧಿ ಏನುಮಾಡಲೂ ಸಿದ್ಧವೆಂಬುದನ್ನಿದು ತೋರಿಸಿಕೊಡುತ್ತದೆ.

ಈ ವರ್ಷದ ಕೊನೆಗೆ ಲೋಕ ಸಭೆ ಚುನಾವಣೆ ನಡೆಯುತ್ತದೆ. ಅಖಿಲ ಭಾರತ ಮತ್ತು ರಾಜ್ಯದ ಕಾಂಗ್ರೆಸ್ ಮುಖಂಡರು ಜನತಾ ಸರಕಾರವನ್ನು ಉರುಳಿಸುವ ತಮ್ಮ ಹೀನ ಕುತಂತ್ರವನ್ನು ಮುಂದುವರಿಸುತ್ತಿದ್ದಾರೆ. ಅಲ್ಪ ಮತಸ್ತರಿಗೆ, ಹರಿಜನ ಗಿರಿಜನರಿಗೆ, ಹಿಂದುಳಿದವರಿಗೆಲ್ಲ ಜನತಾ ಸರಕಾರ ಅನ್ಯಾಯವೆಸಗುತ್ತದೆಂದೂ, ರಾಜ್ಯದಲ್ಲಿ ಕಾನೂನಾಗಲೀ, ಸರಕಾರವಾಗಲೀ ಇಲ್ಲವೇ ಇಲ್ಲೆಂದು ಕಾಂಗ್ರೆಸ್ ಮುಖಂಡರಾದ ಗುಂಡೂರಾವ್, ವೀರಪ್ಪ ಮೊಯಿಲಿ ಮೊದಲಾದವರೆಲ್ಲ ಬೊಬ್ಬೆ ಹೊಡೆಯುತ್ತಿದ್ದಾರೆ. ಬಂಡವಾಳಶಾಹಿ ಪತ್ರಿಕೆಗಳು ಅಂಥ ಅಪಪ್ರಚಾರಗಳಿಗೆ ಸಾಕಷ್ಟು ಪ್ರಚಾರ ನೀಡುತ್ತಿವೆ.

[ಕೊನೆ ಪುಟ ನೋಡಿ]

ಕಾ. ಪಿ. ಆರ್. ಆರೋಗ್ಯ ಸುಧಾರಣೆ

ಕಳೆದ ಮೇ 11 ರಂದು ಯಶಸ್ವಿ ಶಸ್ತ್ರ ಚಿಕಿತ್ಸೆ ನಡೆದು ಗುಣಮುಖರಾಗಿದ್ದ ಸಿ. ಪಿ. ಐ. (ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಕಾ. ಪಿ. ರಾಮಮೂರ್ತಿ ಅವರನ್ನು ಹೃದಯದ ತೊಂದರೆಗಾಗಿ ಮೇ 28 ರಂದು ಮತ್ತೆ ಬೆಂಗಳೂರಿನ ಸೇಂಟ್ ಫಿಲೋಮಿನಾಸ್ ಆಸ್ಪತ್ರೆಗೆ ಸೇರಿಸಲಾಗಿದೆ. ಅವರ ಆರೋಗ್ಯ ಸ್ವಲ್ಪ ಮಟ್ಟಿಗೆ ಸುಧಾರಿಸಿದ್ದರೂ ಕೂಡ ಇನ್ನೂ ಅಪಾಯದಿಂದ ಪಾರಾಗಿಲ್ಲ

ಕಾ. ಪಿ. ಆರ್. ಅವರ ಆರೋಗ್ಯ ವಿಚಾರಿಸಲು ಸಿ.ಐ.ಟಿ.ಯು. ಅಧ್ಯಕ್ಷರಾದ ಕಾ. ಬಿ. ಟಿ. ರಣದಿವೆ. ತಮಿಳುನಾಡಿನ ಸಿ.ಪಿ.ಐ.(ಎಂ) ಶಾಸಕರಾದ ಕಾ. ಆರ್. ಉಮಾನಾಥ್, ಕಾ. ವರದರಾಜನ್, ತಮಿಳುನಾಡು ಸರ್ಕಾರದ ಸಚಿವರಾದ ಶ್ರೀ ಎಸ್. ಟಿ. ಸೋಮಸುಂದರಂ ಮುಂತಾದವರು ಆಗಮಿಸಿದ್ದರು. ಸ್ಥಳೀಯ ಪಕ್ಷದ ಮುಖಂಡರೂ, ಕಾರ್ಯಕರ್ತರೂ ಮತ್ತು ಕಾ. ಪಿ. ಆರ್. ಅವರ ಇಬ್ಬರು ಪುತ್ರಿಯರೂ ಜೊತೆಯಲ್ಲೇ ಇದ್ದು ನೋಡಿಕೊಳ್ಳುತ್ತಿದ್ದಾರೆ.

ಸಂಪಾದಕೀಯ

ಕುಸಿದ ಕಾನೂನು ಯಾವ ರಾಜ್ಯದಲ್ಲಿ ?

ಕೊಲೆ ಹಾಗೂ ಹಲ್ಲೆ ಪ್ರಕರಣಗಳು ಏರುಮುಖವಾಗಿದ್ದು, ರಾಜ್ಯದಲ್ಲಿ ಕಾನೂನು ಹಾಗೂ ಶಾಂತಿ ಪಾಲನೆ ಸಂಪೂರ್ಣ ಹದಗೆಟ್ಟಿದೆಂದೂ ಇದರ ಬಗ್ಗೆ ತಾವು ಇಷ್ಟರಲ್ಲೇ ರಾಜ್ಯಪಾಲರಿಗೆ ಮನವಿ ಸಲ್ಲಿಸುವುದಾಗಿ ಕಾಂಗ್ರೆಸ್ ಮುಖಂಡ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕ ವೀರಪ್ಪ ಮೊಯಿಲಿಯವರು ಹೇಳಿದ್ದಾರೆ. ಎರಡು ದಿವಸಗಳ ಹಿಂದೆ ಮಾಜಿ ಮುಖ್ಯಮಂತ್ರಿ ಗುಂಡೂರಾಯರೂ ಇದಕ್ಕಿಂತಲೂ ಹೀನಾಯ ರೀತಿಯಲ್ಲಿ ಜನತಾ ಸರ್ಕಾರವನ್ನು ಟೀಕಿಸಿದ್ದಾರೆ.

ಯಾವ ರಾಜ್ಯದಲ್ಲಿ ಕಾನೂನು ಕುಸಿದಿದೆ: ಶಾಂತಿ ಹದಗೆಟ್ಟಿದೆಂಬ ಸಂಗತಿ ಪತ್ರಿಕೆಗಳನ್ನು ದಿನನಿತ್ಯ ಓದಿದರೆ ತಿಳಿಯುತ್ತದೆ. ಕಾಂಗ್ರೆಸ್ ಆಡಳಿತೆಯಲ್ಲಿರುವ ಅಸ್ಸಾಂ, ದೆಹಲಿ, ಹರಿಯಾಣ, ಪಂಜಾಬ್, ಉತ್ತರ ಪ್ರದೇಶ, ಬಿಹಾರ, ಒರಿಸ್ಸಾಗಳಲ್ಲಿಯೋ ಅಥವಾ ಕರ್ನಾಟಕದಲ್ಲಿಯೋ, ಎಂಬುದು ಸ್ಪಷ್ಟವಾಗುತ್ತದೆ. ಬಿಹಾರ - ಉತ್ತರ ಪ್ರದೇಶಗಳಲ್ಲಿ ದಿನನಿತ್ಯ ಒಂದಲ್ಲೊಂದು ಊರಲ್ಲಿ ಹರಿಜನ - ಗಿರಿಜನರ ಮೇಲೆ ಅಮಾನುಷ ದಬ್ಬಾಳಿಕೆ ನಡೆಯುವ, ಗುಡಿಸಲು ಸುಡುವ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುವ ಹೃದಯವಿದ್ರಾವಕ ಸುದ್ದಿಗಳು ಪ್ರಕಟವಾಗುತ್ತಿವೆ.

ಜಮೀನುದಾರರು ಪಿಸ್ತೂಲು ಬಂದೂಕು ಹಿಡಿದುಕೊಂಡೇ ಮೆರವಣಿಗೆ ತೆಗೆದು ಕೃಷಿ ಕಾರ್ಮಿಕರನ್ನೂ, ಹರಿಜನ - ಗಿರಿಜನರನ್ನೂ ಕೊಲೆ ಮಾಡುವುದನ್ನು ಅದೇ ರಾಜ್ಯದಲ್ಲಿ ನೋಡುತ್ತಿದ್ದೇವೆ. ಬಿಹಾರದಂತೆಯೇ ಉತ್ತರ ಪ್ರದೇಶದಲ್ಲಿಯೂ ಅಲ್ಪ ಸಂಖ್ಯಾತರ, ಹಿಂದುಳಿದವರ ಮೇಲೆ ಅಷ್ಟೇ ಅಲ್ಲ. ಶಸ್ತ್ರಧಾರಿ ದರೋಡೆಕೋರರ ಗುಂಪು ಹೆಂಗಸರು, ಮಕ್ಕಳನ್ನೊಳಗೊಂಡು ಇಡೀ ಗ್ರಾಮವನ್ನೇ ನಾಶ ಮಾಡುತ್ತಿರುವುದನ್ನೂ ಇಂಥ ದರೋಡೆಕೋರರ ಗುಂಪಿಗೆ ಕಾಂಗ್ರೆಸ್ ಮುಖ್ಯಮಂತ್ರಿಯನ್ನೊಳಗೊಂಡು ಶಾಸಕರೆಲ್ಲ ಬೆಂಬಲ ನೀಡುತ್ತಿರುವುದೂ ಬಹಿರಂಗವಾಗಿದೆ, ಹರಿಯಾಣ - ಪಂಜಾಬಗಳಲ್ಲಿ ನಡು ಬೀದಿಯಲ್ಲೇ ನಿರಪರಾಧಿಗಳ ಕೊಲೆ ನಡೆಯುತ್ತಿದೆ. ಸ್ವತಃ ದಿಲ್ಲಿಯಲ್ಲೇ ಕೊಲೆ - ಸುಲಿಗೆ ಅಷ್ಟೇ ಅಲ್ಲ ಬ್ಯಾಂಕ್, ಮನೆಗಳ ದರೋಡೆ ಅವ್ಯಾಹತವಾಗಿ ನಡೆದಿದೆ. ಇವೆಲ್ಲ ನಡೆದಿರುವುದು ಮೊಯ್ಲಿ ಪಕ್ಷದ ಆಡಳಿತೆಯಲ್ಲಿರುವ ರಾಜ್ಯಗಳಲ್ಲಿ

ಮೊಯ್ಲಿಯವರು ಆರ್ಥಿಕ ಮಂತ್ರಿಯಾಗಿದ್ದಾಗ ನಮ್ಮ ರಾಜ್ಯದಲ್ಲಿ ಬೆಲೆಯೇರಿಕೆ ಕ್ಯಾಪಿಟೇಶನ್ ಫೀ, ಭೂಮಾಲಿಕರ ದಬ್ಬಾಳಿಕೆಗಳ ವಿರುದ್ಧ, ರೈತರಿಗೆ ನ್ಯಾಯ ಬೆಲೆ, ಭೂಮಿ ಹಕ್ಕು ಸರಿಯಾದ ಆಹಾರ ಧಾನ್ಯ ವಿತರಣೆ ಮುಂತಾದ ಬೇಡಿಕೆಗಳ ಸಲುವಾಗಿ ಶಾಂತಿಯುತ ಪ್ರದರ್ಶನಗಳು ನಡೆದಾಗಲೂ, ಪೋಲೀಸರ ಗೋಲಿಬಾರು, ಅತ್ಯಾಚಾರಗಳೆಲ್ಲ ದಿನನಿತ್ಯ ನಡೆದಿದೆಯೆಂಬ ಸಂಗತಿಯನ್ನು ಮೊಯಿಲಿ ಮಹಾಶಯರು ಮರೆತಿರುವಂತೆ ಕಾಣುತ್ತದೆ. ಆದರೆ ನಾಗರೀಕರು ಮಾತ್ರ ಮರೆತಿಲ್ಲ. ಭ್ರಷ್ಟಾಚಾರಿ ಮಂತ್ರಿ ಇಬ್ರಾಹಿಂ ರವರ ವಿರುದ್ಧ ಪ್ರತಿಭಟನೆ ನಡೆದಾಗಲೂ ಅತ್ಯಾಚಾರವೇ, ಡೆಕನ್ ಹೆರಾಲ್ಡ್, ಪ್ರಜಾವಾಣಿ ಯಂಥ ಪತ್ರಿಕೆಗಳು ಕಾಂಗ್ರೆಸ್ ಆಡಳಿತೆಯ ಭ್ರಷ್ಟಾಚಾರವನ್ನು ಬಯಲಿಗೆಳೆದಾಗ, ಅಂಥವುಗಳ ಮೇಲೆ ಗೂಂಡಾಜನರಿಂದ ಆಕ್ರಮಣ ಮಾಡಿಸಿದವರೂ ಮೊಯಿಲಿ ಪಕ್ಷವೇ. ವಿದ್ಯಾರ್ಥಿಗಳು ಶಾಲೆ ಕಾಲೇಜುಗಳಲ್ಲಿ ಫಿ ಕಡಿಮೆಯಾಗಬೇಕೆಂದು ಹೋರಾಡಿದಾಗ ಚಿಂತಾಮಣಿಯಲ್ಲಿ ಗುಂಡುಹಾಕಿ ವಿದ್ಯಾರ್ಥಿಗಳನ್ನು ಕೊಂದವರೂ ಮೊಯಿಲಿ ಸರಕಾರವೇ ಅಲ್ಲವೇ ?

1983 ಜನೇವರಿಯಲ್ಲಿ ಜನತಾ ಸರಕಾರ ಅಧಿಕಾರಕ್ಕೆ ಬರುವ ಮುಂಚೆ ರಾಜ್ಯದಲ್ಲಿ ಕಾನೂನು ಮತ್ತು ಶಾಂತಿ ಪಾಲನೆ ಯಾವ ರೀತಿಯಲ್ಲಿತ್ತು ಈಗ ಯಾವ ರೀತಿಯಲ್ಲಿದೆಂಬ ಸಂಗತಿ ವೀರಪ್ಪ ಮೊಯಿಲಿ ಗುಂಡೂರಾಯರಿಗೆ ಚೆನ್ನಾಗಿ ಗೊತ್ತಿದ್ದರೂ, ಇನ್ನು ನಾಲ್ಕೈದು ತಿಂಗಳಲ್ಲಿ ಲೋಕ ಸಭೆ ಚುನಾವಣೆಯನ್ನೆದುರಿಸಬೇಕಾಗಿ ಬಂದಿರುವಾಗ ಜನರಿಂದ ಮತಗಳಿಸಲು ಇಲ್ಲದ-ಸಲ್ಲದ ಆರೋಪಗಳ ಮೂಲಕ ಜನರ ಮನಸ್ಸಿನ ಮೇಲೆ ಜನತಾ ಸರಕಾರದ ಕುರಿತು ಸಾಕಷ್ಟು ಕೆಟ್ಟ ಭಿಪ್ರಾಯ ಉಂಟುಮಾಡಿ, ಶಾಸಕರ ಪಕ್ಷಾಂತರಕ್ಕೆ ಅವಕಾಶ ಮಾಡಿಕೊಟ್ಟು ಮತ್ತೆ ಅಧಿಕಾರಕ್ಕೆ ಬರುವುದೇ ಇವರ ಮೂಲೋದ್ದೇಶವಾಗಿದೆ.

ಜನತಾ ಸರಕಾರಕ್ಕೆ ನಾವು ಶಹಾಬಾಸ್ ಗಿರಿಯನ್ನೇನೂ ಕೊಡುವುದಿಲ್ಲ. ಪಶ್ಚಿಮಬಂಗಾಲ ಸರಕಾರದಂತೆ ಆಡಳಿತ ನಡೆಸುವ ಶಕ್ತಿ ಅದಕ್ಕಿಲ್ಲೆಂದೂ ತಿಳಿಯತಕ್ಕದ್ದೇ. ಆದರೆ ಹೆಗಡೆ ಸರಕಾರವನ್ನು

[8ನೇ ಪುಟ ನೋಡಿ]

ಕರ್ನಾಟಕ ರಾಜ್ಯದಲ್ಲಿ

ಮದ್ದೂರು ಉಪ ಚುನಾವಣೆ

ಮೇ 20 ರಂದು ನಡೆದ ಮದ್ದೂರು ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಾದ ಶ್ರೀಮತಿ ಜಯವಾಣಿ ಮಂಚೇಗೌಡರು 10,412 ಹೆಚ್ಚು ಮತಗಳಿಂದ ಆರಿಸಿ ಬಂದಿರುವ ಘಟನೆ "ಹೆಗಡೆ ಹಟಾವೊ" ಸರ್ಕಸ್ಸಿನಲ್ಲಿ ತಲ್ಲೀನರಾಗಿದ್ದ ಕಾಂಗ್ರೆಸ್ ಮತ್ತು ರುದ್ರಪ್ಪ ರೈತ ಸಂಘದ ಮುಖಂಡರೊಳಗೆ ಜನತಾ ಸೋತಿರುವುದು "ತಮ್ಮಿಂದಲೇ" ಎಂದು ಎದೆ ಉಬ್ಬಿಸಿ ತಲೆಗೆ ಎರಡು ಕೋಡು (ಕೊಂಬು) ಹಚ್ಚಿಕೊಂಡು ಮೆರೆಯುವಂತೆಯೂ, ಪತ್ರಿಕಾ ಹೇಳಿಕೆಗಳ ಮೂಲಕ ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡು ಶಹಬಾಸ್‌ಗಿರಿ ಪಡೆಯುವಂತೆಯೇ ಮಾಡಿದೆ.

ಮತದಾನದ ಪರಿಣಾಮ ನೋಡಿದರೆ ಇವರಿಬ್ಬರೂ ಬೆನ್ನು ಚಪ್ಪರಿಸಿಕೊಳ್ಳುವಂಥ ಹೆಮ್ಮೆಯ ವಿಷಯವೇನೂ ಉಂಟಾಗಿಲ್ಲೆಂದು ಹೇಳಬಹುದು. ಈ ಸಲ ಕಾಂಗ್ರೆಸ್‌ಗೆ 40,665 ಮತಗಳೂ ಜನತಾಗೆ 30,253 ಮತಗಳೂ, ಬಿದ್ದಿವೆ. ಜನವರಿ 83 ರಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 13,000 ಹೆಚ್ಚು ಮತಗಳಿಂದ ಆರಿಸಿ ಬಂದಿದ್ದರೆ ಈ ಸಲ ಬರೀ 10,412 ಮತ ಹೆಚ್ಚು ಪಡೆದಿದೆ. ಆದೇ ಸಮಯದಲ್ಲಿ ಜನತಾ ಪಾರ್ಟಿಗೆ ಬರೀ 10,351 ಮತ ಬಿದ್ದಿತ್ತು. ಈಗ ಅದಕ್ಕೆ 30,253 ಮತ ಬಿದ್ದಿದೆ. ಜನತಾ ಮೂರರಷ್ಟು ತನ್ನ ಬೆಂಬಲವನ್ನು ಹೆಚ್ಚಿಸಿಕೊಂಡಿದೆಂಬುದು ಗಮನಿಸತಕ್ಕದ್ದು.

ಹೆಗಡೆ ಸರಕಾರಕ್ಕೆ ಬುದ್ಧಿ ಕಲಿಸುವ ಸಲುವಾಗಿ ಕಾಂಗ್ರೆಸ್‌ಗೆ ಮತ ನೀಡಬೇಕೆಂದು ಪ್ರಚಾರ ಮಾಡಿದ ರುದ್ರಪ್ಪ ರೈತಸಂಘ ಮದ್ದೂರು ಚುನಾವಣೆ ಕಾಂಗ್ರೆಸ್ ಗೆಲುವಲ್ಲ, ರೈತಸಂಘದ ಗೆಲುವೆಂದು ಸಾರಿ ಕೆ. ಎಚ್. ಪಾಟೀಲ್ ವೀರಪ್ಪ ಮೊಯಿಲಿಯವರ ಹೆಗ್ಗಳಿಕೆಗೆ ನೀರೆರೆದಿದ್ದಾರೆ. ಮದ್ದೂರು ಚುನಾವಣೆಯ ಸೋಲಿಗೆ ಹೆಗಡೆ ಸರಕಾರ ರಾಜಿನಾಮೆ ಕೊಡಬೇಕೆಂದು ಪಟ್ಟು ಹಿಡಿದಿರುವ ಮೊಯಿಲಿ ಮಹಾಶಯರಿಗೆ ನಂಜುಂಡಸ್ವಾಮಿ ಹೇಳಿಕೆ ಕಹಿ ಗುಳಿಗೆಯಾಗಿರಬೇಕು. ಮದ್ದೂರ ಚುನಾವಣೆ ಫಲಿತಾಂಶದಿಂದಾಗಿ ಹೆಗಡೆ ಸರಕಾರ ರಾಜಿನಾಮೆ ಕೊಡುವ ಕಾರಣ ವಿಲ್ಲ. ಅಂಥ ಪರಂಪರೆಯೂ ಎಲ್ಲಿಯೂ ಇಲ್ಲ.

ತತ್ವಗಳನ್ನು ಕಡೆಗಣಿಸಿ ಜಾತಿ ಮತ್ತು ಓಟಿನ ಮೇಲೆಯೇ ಕಣ್ಣಿಟ್ಟು ಪಕ್ಷಾಂತರಿಗಳನ್ನ ಉಮೇದುವಾರರನ್ನಾಗಿ ನಿಲ್ಲಿಸುವ ಕಾಂಗ್ರೆಸ್ ಪರಂಪರೆಯನ್ನು ಜನತಾಪಕ್ಷ ಅನುಸರಿಸಿರುವುದು ಸರಿಯಲ್ಲ, ಹಾಗೆಯೇ ಚುನಾವಣೆಯ ಸಮಯದಲ್ಲಿ ಮಂತ್ರಿಗಳೆಲ್ಲ ಆ ಚುನಾವಣಾ ಕ್ಷೇತ್ರದಲ್ಲೇ ಮುಕ್ಕಾಂ ಮಾಡಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವಂತೆ ಕಾಂಗ್ರೆಸ್ ಪಕ್ಷದ ಕೆಟ್ಟ ಚಟಗಳನ್ನೇ ಅನುಸರಿಸುತ್ತಿರುವುದೂ ಚಿಲ್ಲರೆ ವ್ಯಾಪಾರದ ಮಟ್ಟಕ್ಕೆ ಜನತಾ ಮಂತ್ರಿಗಳೆಂದು ಹೇಳಿಸಿಕೊಳ್ಳುವಂತಾಗಿದೆ. ಇಂಥ ಅಭ್ಯಾಸಗಳನ್ನೆಲ್ಲ ಜನತಾಪಕ್ಷ ಬಿಟ್ಟುಕೊಡಬೇಕೆಂದು ನಮ್ಮ ಅಪೇಕ್ಷೆ.

ಶಿಕ್ಷಣ ಮಸೂದೆ ಮತ್ತು ಅಜೀಜ್ ಸೇಠ್

ಕುರ್ಚಿಯ ಮೇಲೆ ಕಣ್ಣಿಟ್ಟೇ ಪಕ್ಷದಿಂದ ಪಕ್ಷಕ್ಕೆ ಜಿಗಿಯುತ್ತಾ ಬಂದಿರುವ ಬೀಡಿ ಕಾರ್ಮಿಕರ ಹಳೇ ಮುಖಂಡ ಅಜೀಜಸೇಠರು ಬಂಡೆದ್ದಿದ್ದಾರೆ. ಯಾಕೆ ಗೊತ್ತೇ? ಅಲ್ಪ ಮತಸ್ಥರ, ಮುಸಲ್ಮಾನರ ಹಿತರಕ್ಷಣೆಗಾಗಿ.

ಸಮಗ್ರ ಶಿಕ್ಷಣ ಮಸೂದೆ ಕಳೆದ ಒಂದು ವರ್ಷದಿಂದ ಸಾರ್ವಜನಿಕರ ಸ್ವತ್ತಾಗಿದೆ. ವಿಧಾನ ಸಭೆಯಲ್ಲಿ ಹೋದ ವರ್ಷ ಮಂಡಿಸಲ್ಪಟ್ಟನಂತರ ಸೆಲೆಕ್ಟ್ ಕಮಿಟಿಗೆ ಹೋಗಿ, ಮಂತ್ರಿ ಮಂಡಲ, ವಿಧಾನ ಸಭೆ, ವಿಧಾನ ಪರಿಷತ್ತುಗಳಲ್ಲಿ ಸಾಕಷ್ಟು ಚರ್ಚೆಯಾಗಿದೆ. ಅನಂತರ ಅದು ರಾಷ್ಟ್ರಾಧ್ಯಕ್ಷರ ಮಂಜೂರಾತಿಗಾಗಿ ಕಳುಹಿಸಿಕೊಡಲಾಯಿತು. ಮಂತ್ರಿ ಮಂಡಲದಲ್ಲೂ ವಿಧಾನಸಭೆ ಪರಿಷತ್ತಿನಲ್ಲೂ ಶಿಕ್ಷಣ ಮಸೂದೆಯನ್ನು ವಿರೋಧಿಸದ ಈ ಮನುಷ್ಯ ಅಲ್ಪ ಮತಸ್ಥರ ಹಕ್ಕುಗಳಿಗೆ ಹಾನಿಯನ್ನುಂಟುಮಾಡುವ ಆ ಮಸೂದೆಗೆ ಸಹಿ ಹಾಕಬಾರದೆಂದು ರಾಷ್ಟ್ರಾಧ್ಯಕ್ಷರಿಗೆ ಪತ್ರ ಬರೆದಿರುವುದು ಅತ್ಯಂತ ಅಕ್ಷಮ್ಯ ಮತ್ತು ಸಂವಿಧಾನಕ್ಕೆ ವಿರುದ್ಧವಾದ ಕ್ರಮವಾಗಿದೆ. "ಜ್ಯೋತಿಬಸು ಸರಕಾರ ಇಂಥ ಮಂತ್ರಿಗಳನ್ನು ಎರಡೇ ನಿಮಿಷಗಳಲ್ಲಿ ಹೊರಗೆ ಹಾಕುತ್ತಿತ್ತು" ಎಂದು ಬಿ. ಟಿ. ರಣದಿವೆಯವರು ಇತ್ತೀಚೆಗೆ ಮಂಗಳೂರಿನ ಸಾರ್ವಜನಿಕ ಸಭೆಯಲ್ಲಿ ಅಜೀಜಸೇಠರ ವರ್ತನೆ ಕುರಿತು ಅಭಿಪ್ರಾಯ ವ್ಯಕ್ತಮಾಡಿದ್ದರು. ಒಂದುಕಡೆ ಬಿ. ಜೆ. ಪಿ. ಮತ್ತೊಂದು ಕಡೆ ಅಲ್ಪಮತಸ್ತರಿಗೆ ಸೇರಿದ ಅಜೀಜ್ ಸೇಠರನ್ನ ಬಿಟ್ಟರೆ ತನಗೆ ಗತಿಯಿಲ್ಲೆಂದು ಹೆಗಡೆ ತಿಳಿದಂತೆ ಕಂಡು ಬರುತ್ತದೆ. ಹೆಗಡೆಯವರು ಅಂಥ ತಮ್ಮ ಅಭಿಪ್ರಾಯ ಬಿಟ್ಟು ಕೊಟ್ಟು ತಮ್ಮ ಸರಕಾರಕ್ಕೆ ಬೆಂಬಲ ದೊರಕಿಸಿಕೊಳ್ಳುವ ಸಲುವಾಗಿ ಜನತೆಯ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಮುಂದಾಗಬೇಕೆಂದು ಬಿ. ಟಿ. ರಣದಿವೆಯವರು ಮಂಗಳೂರಿನ ಸಾರ್ವಜನಿಕ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಮಾಡಿದ್ದರು. ಹೆಗಡೆಯವರು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯವರೂ ಅಲ್ಲ, ಎಡ ವಿಚಾರದವರೂ ಅಲ್ಲ. ಜನತಾ ಪಕ್ಷ ಬಂಡವಾಳಶಾಹಿ, ಭೂ ಮಾಲಿಕ ವರ್ಗದ ಪಕ್ಷವಾಗಿರುವುದರಿಂದ ಅಜೀಜ್ ಸೇಠ್‌ರಂತವರ ಮೇಲೆ ಕ್ರಮ ಕೈಗೊಳ್ಳುವ ಧೈರ್ಯ ಅವರಿಗಿಲ್ಲ.

ಅಲ್ಪ ಸಂಖ್ಯಾತರಿಗೂ, ಅವರು ನಡೆಸುತ್ತಿರುವ ಸಂಘ ಸಂಸ್ಥೆಗಳಿಗೂ ಭಾರತ ಸಂವಿಧಾನದಲ್ಲಿಯೇ ರಕ್ಷಣೆ ಇದೆ. ಆದರೆ ಅವರು ನಡೆಸುತ್ತಿರುವ ಶಿಕ್ಷಣ ಮತ್ತಿನ್ನಿತರ ಸಂಘ ಸಂಸ್ಥೆಗಳಲ್ಲಿ ಅವ್ಯವಹಾರಗಳು ನಡೆದರೆ ಅವುಗಳ ಕುರಿತು ಚೌಕಾಶಿ ಮಾಡುವ, ಕ್ರಮ ತೆಗೆದುಕೊಳ್ಳುವ, ಅಲ್ಲಿ ಕೆಲಸ ಮಾಡುತ್ತಿರುವ ನೌಕರದಾರರಿಗೆ ರಕ್ಷಣೆ ಕೊಡುವ ಅಧಿಕಾರವೂ ರಾಜ್ಯ ಸರಕಾರಕ್ಕಿಲ್ಲೆಂದು ಹೇಳಿದರೆ ಅದು ಸರಿಯಲ್ಲ. ಆ ಕಾರಣದಿಂದಲೇ ಅಲ್ಪ ಸಂಖ್ಯಾತರ ಹಕ್ಕು-ಬಾಧ್ಯತೆಗಳಿಗೆ ಧಕ್ಕೆ ಬರುತ್ತದೆಂದು ಹೇಳುವುದು ಮಾತ್ರ ಸರಿಯಲ್ಲ.

ಒಬ್ಬ ಹಿರಿಯ ಕ್ಯಾಬಿನೆಟ್ ಸದಸ್ಯರಾದ ಅಜೀಜ್ ಸೇಠ್‌ರು ತಮ್ಮ ಮಂತ್ರಿ ಮಂಡಲದ, ವಿಧಾನ ಸಭೆಯ ನಿರ್ಣಯದ ವಿರುದ್ಧ ರಾಷ್ಟ್ರಾಧ್ಯಕ್ಷರಿಗೆ ಅರ್ಜಿ ಸಲ್ಲಿಸಿರುವುದು ಅತ್ಯಂತ ಹೇಯ ಕೃತ್ಯ, ಶಿಸ್ತು ಉಲ್ಲಂಘನೆಯಾಗಿದೆ. ಇವರ ನಡತೆಯಿಂದ ಹಿಂದುಳಿದವರ, ಮುಸಲ್ಮಾನರ ಹಿತರಕ್ಷಣೆ ಆಗುವುದಿಲ್ಲ. ಅಲ್ಪ ಸಂಖ್ಯಾತರ ಸಂಘ ಸಂಸ್ಥೆಗಳಲ್ಲಿ ಅವ್ಯವಹಾರ, ಭ್ರಷ್ಟಾಚಾರ, ಅನ್ಯಾಯ ನಡೆಯಲು, ಅವುಗಳಲ್ಲಿ ಗೊಂದಲ ಉಂಟಾಗಲು ಪ್ರಚೋದನೆ ಮಾತ್ರ ಕೊಟ್ಟಂತಾಗುತ್ತದೆ. ಆದ್ದರಿಂದ ಸಾರ್ವಜನಿಕರು ಅಜೀಜ್ ಸೇಠ್‌ರ ಕೃತಿಯನ್ನು ಖಂಡಿಸಲೇ ಬೇಕು ಹೆಗಡೆ ಸರಕಾರ ಅವರ ಮೇಲೆ ಶಿಸ್ತು ಭಂಗ ಕ್ರಮ ಕೈಗೊಳ್ಳಲೇಬೇಕು.

— ಎನ್ನೆ

ಮುಖ್ಯಮಂತ್ರಿಯಾಗುವ 'ನಾ ಕಂಡೆನಾ ಕನಸಾ'

ಕೆಲವು ತಿಂಗಳ ಹಿಂದೆ ತಮಿಳುನಾಡು ಕಾಂಗ್ರೆಸ್ಸಿನಲ್ಲಿ ನೀರು ಕಲಕಿ ಅಜ್ಞಾತವಾಸದಲ್ಲಿದ್ದ ಮಾಜಿ ಮುಖ್ಯಮಂತ್ರಿ ಗುಂಡೂರಾಯರು ಏನೂ ಹಿಡಿಯಲಿಕ್ಕೆ ಹೋಗಿದ್ದರು. ಮತದಾರರಿಂದ ಮನೆಗಪ್ಪಣೆ ಪಡೆದ ಗುಂಡೂರಾಯರು ಮತ್ತೆ ರಾಜಕೀಯ ಬೆಳಕಿನತ್ತ ಸಾಗಲು ಶುರು ಮಾಡಿದ್ದಾರೆಂದೂ, ಕರ್ನಾಟಕದ ಕಾಂಗ್ರೆಸ್ಸಿನೊಳಗಿನ ಹೊಲಸು ಮೇಲಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆಂದೂ ಈ ಹಿಂದೆ ಬರೆದಿದ್ದೆವು. ಅದು ನಿಜವಾಗುತ್ತಿದೆ. ಎರಡು ತಿಂಗಳ ಹಿಂದೆ ಹುಬ್ಬಳ್ಳಿಯಲ್ಲಿ ಸಮಾವೇಶಗೊಂಡಿದ್ದ ಬ್ರಾಹ್ಮಣರ ಸಮ್ಮೇಳನದಲ್ಲಿ ಭಾಗವಹಿಸಿದ ರಾಯರು ಜನತಾ ಸರಕಾರದ ವಿರುದ್ಧ ಮೊದಲನೆಯ ಗುಂಡು ಹಾರಿಸಿದ್ದರು. ಮೇ 29 ರಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪತ್ರಿಕಾ ಸಂದರ್ಶನದಲ್ಲಿ ಜನತಾ ಸರಕಾರದ ವಿರುದ್ಧ ಸ್ಟೆನ್ ಗನ್ ಹಿಡಿದು "ಇಷ್ಟೊಂದು ನಿರ್ಲಿಪ್ತ, ನಿಸ್ಸಹಾಯಕ ಸರಕಾರ ಭಾರತದಲ್ಲೇ ಇಲ್ಲ. ಇಂತಹ ಅನಿಶ್ಚಿತ ಪರಿಸ್ಥಿತಿ ಹಿಂದೆಂದೂ ಬಂದಿರಲಿಲ್ಲ" ಎಂದರು. "ಈಗ ಭೂಮಿ ಹದವಾಗಿದೆಂದೂ, ಉಳುಮೆ ಶುರು ಮಾಡಿದ್ದೇನೆ, ಒಳ್ಳೆ ಬೆಳೆ ಬರುವ ನಿರೀಕ್ಷೆಯಿಂದ ಬಿತ್ತನೆ ಹಾಕುತ್ತೇನೆ. ಮತ್ತೆ ಮುಖ್ಯಮಂತ್ರಿಯಾಗುವ ಆಸೆಯಿದೆ. ಆದರೆ ಇನ್ನೊಬ್ಬ ಮುಖ್ಯಮಂತ್ರಿಯ ಕೆಳಗೆ ನನ್ನ ಶವವೂ ಮಂತ್ರಿಯಾಗಲಾರದು" ಎಂದು ತನ್ನ ಮನದೊಳಗಿನ ಮಹದಾಸೆಯನ್ನು ಹೊರಗೆಡವಿದರು ಗುಂಡೂರಾಯರು.

ಹದಿನೇಳು ತಿಂಗಳು ಮೌನವ್ರತ ಆಚರಿಸುತ್ತಿದ್ದ ಗುಂಡೂರಾಯರು ಮತ್ತೊಮ್ಮೆ ಮುಖ್ಯಮಂತ್ರಿಯಾಗಿಯೇ ತೀರುತ್ತೇನೆಂದು ದೃಢವಾಗಿ ಹೇಳಬೇಕಾದರೆ ದಿಲ್ಲಿ ದೇವತೆಗಳ ಭದ್ರ ಕವಚದ ರಕ್ಷಣೆ ಇವರಿಗೆಂದು ಭಾವಿಸಬೇಕಾಗುತ್ತದೆ. ಸಂಜಯ ಗಾಂಧಿಯವರ ಬೆಂಬಲದಿಂದ ಮುಖ್ಯಮಂತ್ರಿ ಗದ್ದುಗೆಗೇರಿದ ಈ ಮಹಾಶಯ ಈಗ ರಾಜೀವ ಗಾಂಧಿಯೊಡನೆ ಆತ್ಮವಿಶ್ವಾಸ ಗಳಿಸಿರಬೇಕು. ಭಾವಿ ಪ್ರಧಾನ ಮಂತ್ರಿ ರಾಜೀವ ಗಾಂಧಿ ಎಂದು ಹೇಳುವ ಉಧೋ ಉಧೋ ಘೋಷಣೆಯಲ್ಲಿ ಗುಂಡೂರಾಯರ ಧ್ವನಿ ಸೇರಿರಬೇಕು. ಆದ್ದರಿಂದಲೇ ಮುಖ್ಯಮಂತ್ರಿ ಕುರ್ಚಿಯ ಮೇಲೆ ಮತ್ತೊಮ್ಮೆ ಮೆರೆಯುತ್ತೇನೆಂದು ಕನಸು ಕಾಣುತ್ತಿರುವುದಾಗಿದೆ.

ಇಂದಿರಾ ಗಾಂಧಿಯ ಸರ್ವಾಧಿಕಾರಕ್ಕೆ ಬೇಸತ್ತು ಆಗಿನ ಮುಖ್ಯಮಂತ್ರಿ ದೇವರಾಜ ಅರಸ್ ಅವರು ಇಂದಿರಾ ಗಾಂಧಿಯಿಂದ ಬೇರ್ಪಟ್ಟಾಗ, 1980 ರ ಲೋಕಸಭೆ ಚುನಾವಣೆಯಲ್ಲಿ ಅವರ ಪಕ್ಷಕ್ಕೆ ಸೋಲುಂಟಾಯಿತು. ದೇವರಾಜ ಅರಸರ ಆತ್ಮೀಯರೆಲ್ಲ ಕಾಂಗ್ರೆಸ್ ಸೇರಿದರು. ಅರಸರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು.

ಈ ವರ್ಷ ಕೊನೆಗೆ ನಡೆಯುವ ಲೋಕಸಭೆ ಚುನಾವಣೆಯಲ್ಲಿ ಜನತಾ ಸೋತು, ಕಾಂಗ್ರೆಸ್ ಆರಿಸಿ ಬರುತ್ತದೆಂಬ ಹಗಲು ಕನಸ್ಸು ಕಾಣುತ್ತಿದ್ದಾರೆ ಗುಂಡೂರಾಯರು. ಹಾಗಾದಲ್ಲಿ ಬಹು ಮಂದಿ ಜನತಾ ಶಾಸಕರು ತನ್ನ ಬೆಂಬಲಕ್ಕೆ ಬರುತ್ತಾರೆ. ತಾನು ಮುಖ್ಯಮಂತ್ರಿ ಪದ ಅಲಂಕರಿಸುತ್ತೇನೆಂಬುದು ಅವರ ಆಸೆ

1980 ರಿಂದ 1984ರ ವರೆಗೆ ತುಂಗಾ ಕಾವೇರಿಯಲ್ಲಿ ಬಹಳಷ್ಟು ನೀರು ಹರಿದು ಹೋಗಿದೆ. ಕರ್ನಾಟಕ-ಆಂಧ್ರ ಜನತೆ ಕಾಂಗ್ರೆಸ್ಸನ್ನು ತ್ಯಜಿಸಿದ್ದಾರೆ. ಕಾಂಗ್ರೆಸ್ ವಿರೋಧಿ ಮುಖ್ಯಮಂತ್ರಿಗಳೂ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳೆಲ್ಲ ಒಟ್ಟುಸೇರಿ ಕನಿಷ್ಠ ಕಾರ್ಯಕ್ರಮಗಳಿಗಾಗಿ ದೇಶಾದ್ಯಂತ ಚಳುವಳಿ ನಡೆಸುತ್ತಿವೆ. ಕಾಂಗ್ರೆಸ್‌ನ ಸರ್ವಾಧಿಕಾರದ ವಿರುದ್ಧ, ಅದರ ಆರ್ಥಿಕ ನೀತಿಯ ವಿರುದ್ಧ ಕೇಂದ್ರ - ರಾಜ್ಯ ಸಂಬಂಧಗಳ ಕುರಿತು, ರೈತ - ಕಾರ್ಮಿಕರ ಸಮಸ್ಯೆಗಳ ಕುರಿತು, ಸಿ. ಪಿ. ಐ. (ಎಂ), ಸಿ. ಪಿ. ಐ. ಹಾಗೆಯೇ ಇತರ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷ ಗುಂಪುಗಳೆಲ್ಲ ಕಾಂಗ್ರೆಸ್ ವಿರುದ್ಧ ಜನಾಭಿಪ್ರಾಯ ಮೂಡಿಸುತ್ತಿವೆ. ಇತ್ತೀಚೆಗೆ ನಡೆದ ಚುನಾವಣೆಗಳು ಕಾಂಗ್ರೆಸ್ ವಿರೋಧ ಮನೋಭಾವನೆಯ ದಿಕ್ಸೂಚಿಯಾಗಿವೆ.

ದೇಶಾದ್ಯಂತ ಬೆಳೆದು ಬರುತ್ತಿರುವ ಜನಜಾಗೃತಿಯ ಲಾಭ ಪಡೆದು ಕರ್ನಾಟಕದ ಜನತಾ ಸರಕಾರ ಜನಸಾಮಾನ್ಯರ ಸಮಸ್ಯೆಗಳ ಪರಿಹಾರದತ್ತ ಗಮನ ಹರಿಸಿ, ಅಖಿಲ ಭಾರತ ಮಟ್ಟದ ಕಾರ್ಯಕ್ರಮ, ಸಮಾವೇಶ, ಚಳುವಳಿಗಳು ಯಶಸ್ವಿಯಾಗುವಂತೆ ನೋಡಿಕೊಳ್ಳುವುದು ಜನತಾ ಸರಕಾರದ ಆದ್ಯ ಕರ್ತವ್ಯ. ತನ್ನ ಆಡಳಿತ ಪಕ್ಷ, ಕಾರ್ಯಕರ್ತರಲ್ಲಿ ಹೊಸ ಚೇತನ ತುಂಬಿಸಿ, ಪಶ್ಚಿಮ ಬಂಗಾಲ ತ್ರಿಪುರ, ಮಾದರಿಯಲ್ಲಿ ಹೆಗಡೆ ಸರಕಾರ ಆಡಳಿತ ನಡೆಸಬೇಕಾಗಿದೆ. ಬಂಡವಾಳಶಾಹಿ ಗುಣಗಳನ್ನೇ ಹೊಂದಿರುವ ತನ್ನ ಪಕ್ಷದಿಂದ ಆಡಳಿತೆಯಲ್ಲಿ ಹೆಚ್ಚಿನ ಬದಲಾವಣೆ ಉಂಟುಮಾಡಲು ಸಾಧ್ಯವಾಗದಿರುವುದನ್ನು ಕಂಡೇ, ಗುಂಡೂರಾಯರ

(7ನೇ ಪುಟ ನೋಡಿ)

ದ. ಕ. ಜಿಲ್ಲೆಯ ಟ್ರೇಡ್ ಯೂನಿಯನ್ ಹೋರಾಟ ಮತ್ತು ಚರಿತ್ರೆ

— ಬಿ. ನಾರಾಯಣ

(ಹಿಂದಿನ ಸಂಚಿಕೆಯಿಂದ)

1949 ಡಿಸೆಂಬರ್‌ನಲ್ಲಿ ಯೂನಿಯನ್‌ನ ಎಐಟಿಯುಸಿ ಅಧ್ಯಕ್ಷ ಕಾಂ. ಚೆಕ್ಕರೈ ಚೆಟ್ಟಿಯಾರ್ ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕಿ ವಿವಾದ ನಡೆದು ಮಜೂರ ಸಂಘಟನೆ ಮೇಲಿನ ನಿಷೇದವನ್ನು ಸುಪ್ರೀಂ ಕೋರ್ಟು ತೆಗೆದು ಹಾಕಿತು. ಎಸ್. ಕೆ. ಟೈಲ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಕಾಂ. ಬಿ. ನಾರಾಯಣ ಸೆಷನ್ ಕೋರ್ಟಿಗೆ ಅರ್ಜಿ ಹಾಕಿದರು ಸುಪ್ರೀಂ ಕೋರ್ಟಿನ ತೀರ್ಪಿನ ಆಧಾರದಂತೆ ದ. ಕ. ಜಿಲ್ಲೆಯ ಎಲ್ಲ ಯೂನಿಯನ್ನಿನ ಕಛೇರಿಗಳ ಬೀಗಮುದ್ರೆ ತೆಗೆಸುವಂತೆ ಹಂಚಿನ ಮಜೂರರ ಕಛೇರಿಯ ಸೊತ್ತುಗಳನ್ನು ಹಿಂದೆ ಕೊಡುವಂತೆ ಸೆಷನ್ ಕೋರ್ಟು ತೀರ್ಪು ನೀಡಿತು. ಅರ್ಧ ಕ್ಕರ್ಧ ಸೊತ್ತುಗಳು ಮಾತ್ರ ದೊರಕಿಯಿತು.

ಮಜೂರ ಸಂಘಟನೆಯ ಕೆಲಸವು ಭೂಗತವಾಗಿ ನಡೆಯುತ್ತಿದ್ದ ಈ ಸಂದರ್ಭದಲ್ಲಿ ಜೆಪ್ಪು ಮುನ್ಸಿಪಾಲಿಟಿ ಆಸ್ಪತ್ರೆ ಎದುರಿನ ಮಾಳಿಗೆಯಲ್ಲಿ ಹೊಸ ಕಛೇರಿಯನ್ನು ತೆರೆಯಲಾಯಿತು.

1950ರಲ್ಲಿ ಕರ್ನಾಟಕ ಪ್ರದೇಶದ ಪ್ರಥಮ ಟ್ರೇಡ್ ಯೂನಿಯನ್ ಸಮ್ಮೇಳನ ಬೆಂಗಳೂರಿನಲ್ಲಿ ಕಾಂ. ಚೆಕ್ಕರೈ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ದ. ಕ. ಜಿಲ್ಲೆಯಿಂದ 18 ಪ್ರತಿನಿಧಿಗಳು ಭಾಗವಹಿಸಿದ್ದರು.

1950ರಲ್ಲಿ ಮೋಟಾರು, ಬಸ್ಸು, ಲಾರಿ ಸಾರಿಗೆಯ ಕಾರ್ಮಿಕರು ಸಂಬಳ ಹೆಚ್ಚಳ, ಬೋನಸ್‌ಗಾಗಿ ಮುಷ್ಕರ ನಡೆಸಿದರು. ಯಶಸ್ವಿಯಾಗಿ 19 ದಿನಗಳ ಮುಷ್ಕರ ನಡೆಯಿತು. ಯು. ಎಸ್. ಕುಡ್ವರ ಜಾಣತನ ಈ ಮುಷ್ಕರ ಮುರಿಯುವುದರಲ್ಲೂ ಪ್ರದರ್ಶನವಾಯಿತು.

1951ರಲ್ಲಿ ಸ್ಥಾನಭದ್ರತಾ ಕಾಯಿದೆಯನ್ನು ಹಿಂತೆಗೆದು ಜೈಲಿನಲ್ಲಿದ್ದವರ ಬಿಡುಗಡೆಯಾಯಿತು. ಮಜೂರರನ್ನು ಪುನರ್ ಸಂಘಟಿಸಿ ಹೊಸ ಕಾರ್ಯಕ್ರಮ ಧೋರಣೆಯನ್ನು ರಚಿಸಲ್ಪಟ್ಟಿತು 1952ರಲ್ಲಿ ಮಹಾ ಚುನಾವಣೆ ನಡೆದು ಮಜೂರರಿಗೆ ರಾಜಕೀಯ ಹೋರಾಟ ಅನುಭವವಾಯಿತು.

ದಬ್ಬಾಳಿಕೆಯ ಈ ಮೂರು ವರ್ಷಗಳ ಕಾಲದಲ್ಲಿ ಮಜೂರರನ್ನು ಬೇರೆ ಸಂಘಗಳಿಗೆ ತಿರುಗಿಸಲು ಸೋಷಲಿಸ್ಟ್ ಪಕ್ಷದವರು ಹಲವು ವಿಫಲ ಪ್ರಯತ್ನಗಳನ್ನು ನಡೆಸಿದರು. ಮಜೂರರೂ ಕೆಂಪುಗೆ ಒಂದೇ ತಂದೆ ಎನ್ನುವ ದೃಢ ನಿಲುವಿನಲ್ಲಿ ಜಗ್ಗದೆ ಉಳಿದರು.

1953ರಲ್ಲಿ ಟ್ರೈಬ್ಯುನಲ್, ಎಪಿಲೇಟ್, ಟ್ರೈಬ್ಯುನಲ್ ಬೋನಸ್ಸು ಫಾರ್ಮುಲ, ಲಾಭವಿದ್ದರೆ ಮಾತ್ರ ಬೋನಸ್ಸು ಎನ್ನುವ ಕಾನೂನು ಪಾರ್ಲಿಮೆಂಟಿನಲ್ಲಿ ಪಾಸಾಯಿತು. ಹಂಚಿನ ಮಾಲಿಕರು ಸೇರಿದಂತೆ ಎಲ್ಲ ಮಾಲಿಕರುಗಳು ಲಾಭವಿಲ್ಲವೆಂದು ಘೋಷಿಸಿದರು. ನಮ್ಮ ಜಿಲ್ಲೆಯಲ್ಲಿ ಪ್ರಥಮವಾಗಿ ಬೋನಸ್ಸು ಪಡೆದ ಹಂಚಿನ ಮಜೂರರು, ಮಾಲಕರು ಕಾನೂನನ್ನು ಉಪಯೋಗಿಸಿ ಬೋನಸ್ಸನ್ನು ನಷ್ಟ ತೋರಿಸಿ ನಿಲ್ಲಿಸುವಾಗಪು: ಮಜೂರಿ ಹೆಚ್ಚಳ ಮತ್ತು ಬೋನಸ್ಸು ಕೊಟ್ಟರು. ನೆಹರೂ ಸರಕಾರದ ದೊಡ್ಡ ದಬ್ಬಾಳಿಕೆ ನಡೆಯಿತು. ಕಾರ್ಖಾನೆ ಎದುರು ಪಿಕೆಟಿಂಗ್ ನಡೆಸುತ್ತಿರುವರಿಗೆ ಲಾಠಿ ಚಾರ್ಜ್, ಕರಿ ಆಳುಗಳನ್ನು ತಂದು ಹಂಚು ತುಂಬಿಸುವಾಗ ನೂರುಗಟ್ಟಲೆ ಸ್ತ್ರೀ ಮಜೂರರು ಹಂಚು ತುಂಬುವ ಮಚ್ಚಿನ ಮೇಲೆ ಹೋಗಿ ಕುಳಿತರು. ಹೆಂಗಸರಿಗೆ ಹೆದರಿಕೆ ಹುಟ್ಟಿಸಲು ನಿಮ್ಮನ್ನು ಸಮುದ್ರಕ್ಕೆ ಎಸೆಯುತ್ತೇವೆಂದು ಪೋಲೀಸರು, ಮಾಲಕರ ಗೂಂಡಗಳು ಹಗ್ಗವನ್ನು ಬಿಚ್ಚಿ ಮುಚ್ಚುವನ್ನು ಸಮುದ್ರ, ಅಳವೆಯವರೆಗೆ ತೆಗೆದುಕೊಂಡು ಹೋಗಿ ವಾಪಾಸು ತಂದುಬಿಟ್ಟಿದ್ದರು. ಇಂತಹ ಘಟನೆ ನಾಲ್ಕೈದು ಕಡೆಗಳಲ್ಲಿ ನಡೆದಿತ್ತು. ದಬ್ಬಾಳಿಕೆಯನ್ನು ಸರಿಪಡಿಸಲಾಗದೆ, ಮಜೂರರು ಮುಷ್ಕರವನ್ನು ಹಿಂತೆಗೆದುಕೊಂಡರು.

ಮದ್ರಾಸು ಸರಕಾರ ಬೋನಸ್ಸಿನ ವಿವಾದವನ್ನು ಮಾತ್ರ ಕೊಯಮುತ್ತೂರು ಇಂಡಸ್ಟ್ರಿಯಲ್ ಟ್ರೈಬ್ಯುನಲ್‌ಗೆ ಒಪ್ಪಿಸಿತು. ಈ ಮುಷ್ಕರದಲ್ಲಿ ಮಾಲಕರ ಗೂಂಡಾ ಮುಂದಾಳು ಒಬ್ಬ ಸತ್ತ ಕಾರಣಕ್ಕೆ ಮಜೂರರ ಮೂರು ಕಾರ್ಯಕರ್ತರಿಗೆ ಸೆಷನ್ ಕೋರ್ಟು ಗಲ್ಲು ಶಿಕ್ಷೆ ವಿಧಿಸಿತು ದ. ಕ. ಜಿಲ್ಲೆಯ ಮಜೂರ ಸಂಘಟನೆಯ ಬಲದಿಂದ ಗಲ್ಲು ಶಿಕ್ಷೆಯನ್ನು ವಜಾಮಾಡಲು ಸಾಧ್ಯವಾಯಿತು. ಮದರಾಸು ಹೈಕೋರ್ಟ್ ಗಲ್ಲುಶಿಕ್ಷೆಯನ್ನು ಹಿಂತೆಗೆಯಲು ತೀರ್ಪನ್ನು ನೀಡಿತು.

ಕೊಯಮುತ್ತೂರು ಇಂಡಸ್ಟ್ರಿಯಲ್ ಟ್ರೈಬ್ಯುನಲ್ 32 ಕಾರ್ಖಾನೆಗಳ ಬೋನಸ್ಸು ವಿವಾದವನ್ನು ಬೋನಸ್ಸು ಫಾರ್ಮುಲ ಪ್ರಕಾರ ಚರ್ಚಿಸಿ 15 ಕಾರ್ಖಾನೆಗಳಿಗೆ 3-4 ತಿಂಗಳಿಂದ 3 ತಿಂಗಳವರೆಗೆ ಬೋನಸ್ಸು ನೀಡಲು ತೀರ್ಪು ನೀಡಿತು. ಬಾಕಿ ಕಾರ್ಖಾನೆಗೆ ಬೋನಸ್ಸಿಲ್ಲ. ಈ ವಿವಾದಕ್ಕೆ ಮದರಾಸಿನ ಹೈಕೋರ್ಟ್ ವಕೀಲರಾದ ಶ್ರೀ ಕೆ. ಶಂಕರ್‌ರವರನ್ನು ಕೆ. ರಾಮನ್‌ರೆಡ್ಡಿ ವಕೀಲರ ತಂಡ ಕಳುಹಿಸಿತ್ತು.

1954-55 ಗೇರುಬೀಜ ಮಜೂರರು ಕಾರ್ಖಾನೆ ಬಂದಾಗುವ ಸಮಯಕ್ಕೆ ಲೇ ಆಫ್ ಸಿಗಬೇಕೆಂದು 38 ದಿನಗಳ ಮುಷ್ಕರಕ್ಕೆ ಒತ್ತಾಯವಾಗಿ ಸತ್ಯಾಗ್ರಹ ನಡೆಯಿತು. ಪದಂಗಡಿ ಸ್ವಸ್ತಿ ಗೇರುಬೀಜ ಕಾರ್ಖಾನೆ, ಡೊಂಗರಕೆರೆ ಮಲ್ಯಾ ಗೇರುಬೀಜ ಕಂಪನಿಯಲ್ಲಿ ಮಜೂರರ ಅನ್ನ ಸತ್ಯಾಗ್ರಹ ತಂಡ ತಂಡವಾಗಿ ನಡೆಯಿತು. ಸಂಘದ ಅಧ್ಯಕ್ಷರು ಡೊಂಗರಕೆರೆ ಮಲ್ಯ ಕಂಪನಿ ಗೇಟು ಬಳಿ ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡರು. 11ನೇ ದಿನ ಪಂಚಾಯತಿಗೆ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷತೆ ಕೆ. ಕೆ. ಹೆಗ್ಡೆ, ಸೂರ್ಯನಾರಾಯಣ ಅಡಿಗ ಮುನ್ಸಿಪಲ್ ಚೇರ್‌ಮನ್, ಚೇಂಬರ್ ಅಧ್ಯಕ್ಷ ಶ್ರೀ ಮಲ್ಯ ಇವರಿಗೆ ವಹಿಸಲಾಯಿತು. ಇವರು ಒಂದು ತಿಂಗಳ ಕಾಲ ಕೇಳಿಕೆಗಳನ್ನು ಪರಿಶೀಲಿಸಿ ಲೇ ಆಫ್ ನೀಡಲು ಈ ಕೈಗಾರಿಕೆಗೆ ಸಾಧ್ಯವಿಲ್ಲವೆಂದು ತೀರ್ಪು ನೀಡಿದರು. ಮಜೂರರಿಗೆ ಬಾರಿ ಅಸಮಾಧಾನ ಉಂಟಾಯಿತು.

1956ರಲ್ಲಿ ಬಂದರು ಲೋಡಿಂಗ್ ಅನ್‌ಲೋಡಿಂಗ್ ಮಜೂರರು ಮಜೂರಿ ಹೆಚ್ಚಳಕ್ಕಾಗಿ ಮುಷ್ಕರ ಹೂಡಿದರು. ಹಳದಿ ಮತ್ತು ಕಪ್ಪು ಟೊಪ್ಪಿ ಧರಿಸಿದ ಗೂಂಡಾಗಳು ಲೋಡಿಂಗ್, ಅನ್‌ಲೋಡಿಂಗ್ ಮಾಡಿ ಮುಷ್ಕರ ಮುರಿದರು.

ಮಜೂರರಲ್ಲಿ ಪರಿಷ್ಕರಣವಾದ ಬೆಳೆಯು ಆರಂಭಿಸಿತು. ಹಂಚಿನ ಕೈಗಾರಿಕೆಯಲ್ಲಿ 4 ಒಪ್ಪಂದ ಪರಿಷ್ಕರಣ ನ್ಯಾಯ ಕಕ್ಷದಲ್ಲಿ ನಡೆಯಿತು. 1958ರಲ್ಲಿ ಬಂದರು ಮಜೂರರನ್ನು ಪುನರ್ ಸಂಘಟಿಸಿ ಮುಷ್ಕರಕ್ಕೆ ತಯಾರಾಗುವಾಗ ಡಿ.ಸಿ. ಮೂಲಕ, ಮಜೂರ ಪ್ರತಿನಿಧಿಗಳನ್ನು ಕರೆದು ಶೇಕಡ 30 ಮಜೂರಿ ಪಡೆಯಲು ಸಾಧ್ಯವಾಯಿತು. 1958ರಲ್ಲಿ ನೇಕಾರ ಸಂಘ ನಿಧಾನ ಕೆಲಸ ಮತ್ತು ಒಂದು ದಿನದ ಮುಷ್ಕರದಿಂದ ಶೇಕಡ 30 ಮಜೂರಿ ಹೆಚ್ಚಳ ಪಡೆಯಿತು. ಗೇರುಬೀಜ ಹೋರಾಟ ಚಳುವಳಿ ಒಂದು ದಿನದ ಮುಷ್ಕರದಿಂದ ಪೌಂಡಿಗೆ 6 ಪೈಸೆ ಹೆಚ್ಚಳ ದೊರೆಯಿತು.

ಬಂಟವಾಳ ತಾಲೂಕಿನ ನಂದಾವರದಲ್ಲಿ ಬೀಡಿ ಕಟ್ಟುವ ಮುಸ್ಲಿಂ ಸ್ತ್ರೀ ಮಜೂರರನ್ನು ಕೆಲಸದಿಂದ ವಜಾ ಮಾಡಿದಕ್ಕೆ, ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಪಿಕೆಟಿಂಗ್ ಮಾಡಿ 350 ಜನ ಬಂಧನಕ್ಕೊಳಗಾದರು. ಇದರಲ್ಲಿ 300ಕ್ಕೂ ಹೆಚ್ಚು ಸ್ತ್ರೀ ಮಜೂರರಾಗಿದ್ದರು.

1958 ರಲ್ಲಿ ಕುಂದಾಪುರದಲ್ಲಿ ಹಂಚಿನ ಮಜೂರರ ಸಂಘಟನೆಗೆ ಮಾಡಬೇಕೆಂದು ಇಬ್ಬರನ್ನು ಅಭ್ಯಾಸ ಮಾಡಲು ಕಾರ್ಯಕಾರಿ ಸಮಿತಿ ಕಳುಹಿಸಿಕೊಟ್ಟಿತು. 10 ದಿನಗಳು ಪರಿಶೀಲಿಸುವಾಗ 0-50 ಮತ್ತು 0-75 ಪೈಸೆಗೆ ದುಡಿಸುವ ಕಾನೂನು ಸವಲತ್ತನ್ನು ವಂಚಿಸುವ ಪರಿಸರ ಕಂಡು ಬಂತು. ಒರೇ ಮೂರು ಕಾರ್ಖಾನೆಯಿದ್ದು 300 ಕೆಲಸಗಾರರು ಮಂಗಳೂರಿನವರೇ ಆಗಿದ್ದರು. ಸಂಘಟನೆಗೆ ಅಡಿಪಾಯವಾಗಿ ತಾತ್ಕಾಲಿಕ ಸಮಿತಿ ಮಾಡಿದ್ದಾಗ ಮಾಲಕರ ದಬ್ಬಾಳಿಕೆ ಹೆಚ್ಚಿಸಿ ವಜಾಗೊಳಿಸುವುದನ್ನು ಮುಖ್ಯ ಅಸ್ತ್ರವಾಗಿ ಉಪಯೋಗಿಸಿದರು. ಉದಾಹರಣೆಗೆ ಕಾಮತ್ ಟೈಲ್ ವರ್ಕ್ಸ್‌ನಲ್ಲಿ 80 ಜನರನ್ನು ವಜಾ ಮಾಡಲಾಯಿತು. ಆದರೂ ಸಂಘಟನೆ ಮುಂದುವರಿಯಿತು. 1962 ಜನವರಿಯಲ್ಲಿ ಪ್ರಥಮ ಒಪ್ಪಂದ ಮಜೂರಿ ಹೆಚ್ಚಳ, ಬೋನಸ್ಸು, ರಜೆ ಸಂಬಳಕ್ಕೆ ಮಾಲಕ ಮಜೂರರ ಮಧ್ಯೆ ನಡೆದದ್ದು ಚಾರಿತ್ರಿಕ ವಿಜಯವಾಯಿತು.

ನಂತರ 1978 ರವರೆಗೆ ಹೋರಾಟ, ಚಳವಳಿ, ನಿಧಾನ ಕೆಲಸ, ಲೋಡಿಂಗ್ ನಿಲ್ಲಿಸುವ ತಂತ್ರಗಳ ಮುಖಾಂತರ 5 ಒಪ್ಪಂದಗಳು ಮುಗಿಯಿತು.

1967 ಡಿಸೆಂಬರ್ ಮಂಗಳೂರಿನ ಟೈಲ್ ಕಾರ್ಮಿಕರ ಒಪ್ಪಂದ ಮುಗಿಯುವಾಗ 3 ರಲ್ಲಿ ಒಂದಂಶವನ್ನು ಕೈಗಾರಿಕೆ ವಿವಾದ ಕಾನೂನಿನ 9 ಎ ಸೆಕ್ಷನ್ ಪ್ರಕಾರ ಕಡಿತಗೊಳಿಸುವುದಾಗಿ ಮಾಲಕರು ಪ್ರಕಟಿಸಿದರು. ಮಜೂರಿ ಕಡಿತಕ್ಕೆ ವಿರುದ್ಧವಾಗಿ 1968 ಜನವರಿ 25 ರಿಂದ ಮುಷ್ಕರ ಪ್ರಾರಂಭವಾಯಿತು. 37 ದಿನದ ಮುಷ್ಕರದ ನಂತರ ಸರಕಾರ ಈ ವಿವಾದವನ್ನು ಇಂಡಸ್ಟ್ರಿಯಲ್ ಟ್ರೈಬ್ಯುನಲ್‌ಗೆ ಹಾಕಿತು. ಹೈಕೋರ್ಟ್, ಇಂಡಸ್ಟ್ರಿಯಲ್ ಟ್ರೈಬ್ಯುನಲ್ ವಿವಾದ ನಡೆಯುವಾಗ ಮಾಲಕ ಸಂಘ ಮಜೂರರ ಸಂಘಕ್ಕೆ ಇದ್ದ ಕೂಲಿಯನ್ನು ಉಳಿಸಿ 45 ಪೈಸೆ ಹೆಚ್ಚಳದೊಂದಿಗೆ ಒಪ್ಪಂದವಾಯಿತು.

1980 ಜನವರಿಯಲ್ಲಿ ನಿಧಾನ ಕೆಲಸ, ಲೋಡಿಂಗ್ ಕಮ್ಮಿ ಮಾಡುವುದನ್ನು ಮಾಲಕರು ಒಂದು ತಿಂಗಳಿಗೆ

[6ನೇ ಪುಟ ನೋಡಿ]

.... ಹಲವಾರು ಲೆಬನಾನ್


ಮಾನವೀಯತೆಯ ಈ ಕಾಡಿನೊಳಗೆ
ನೀನು ಸಿಡಿಸಿದ ಬಾಂಬು
ಹಾರಿದ ಪೈಶಾಚಿಕ ಗಳು, ಸಾವಿರ ಶೆಲ್ಲುಗಳಿಗೆ
ಹರಿದ ನೆತ್ತರ ಧಾರೆಗೆ
ನನ್ನ ಹೃದಯ ಚೂರು
ಹಾಡುಗಳ ಕಾಡಿನಲಿ, ಕನಸುಗಳ ಗೂಡಿನಲಿ
ಜೀವನದ ಬೇರುಗಳು ಒಣಗಿ ಮುದುಡುತ್ತಿದ್ದಾಗ
ಮೌನದ ಮುಗ್ಗುಲಲಿ ಮಾತು ಮರ್ಮರ ಶಬ್ಧ
ಕೋವಿಗಳ ಕುದಿಗಳಿಗೆ ಹಲವಾರು ಲೆಬನಾನ್
ಕಪ್ಪು ಕಲೆಗಳ ಮಧ್ಯೆ ಹಲವಾರು ಸುಟ್ಟ ನಗೆ
ಮುಸುಕಿದ್ದ ಮೌನದಲಿ ಪಿಸುಗುಡುವ ಶಬ್ಧ
ಎಲ್ಲೆಲ್ಲೂ ಸಾವುಗಳು, ಹಸಿದಿರುವ ಬಾಯಿಗಳು
ಸಂಸ್ಕೃತಿಯ ಹೆಸರಿನಲಿ ಸಿಕ್ಕವರ ದಮನ
ಸಾವು ಬದುಕಿನ ನಡುವೆ ಹಲವಾರು ಮಾತುಗಳು
ಕತ್ತಲೆಯ ಕಾಡಿನಲಿ ಕೋವಿಗಳ ಪಯಣ
ಹೂವುಗಳ ನಳೆಯಲ್ಲಿ, ಗುಂಡುಗಳ ಮರೆಯಲ್ಲಿ
ಬೆನ್ನ ಕಲೆಗಳ ಹಿಂದೆ ನೂರಾರು ನೋವು
ಬಾಂಬುಗಳ ಅಡಿಯಲ್ಲಿ ಹಲವಾರು ಹಸುಳೆಗಳು
ಪಾರಿವಾಳದ ದನಿಗೆ ನೂರು ಗುಂಡು
ಗೋರಿಗಳ ಮಧ್ಯದಲಿ ಬದುಕುಳಿದ ಜೀವಗಳು
ಕಪ್ಪು ಮೋಡದ ಮಧ್ಯೆ ಕೆಂಪು ಕನಸು
ಕತ್ತಲೆಯ ಮುನ್ನದಲಿ ಮಾತುಗಳು ನೂರಾರು
ಒಂದೊಂದು ಮನೆಯಲ್ಲು ಒಬ್ಬೊಬ್ಬ 'ಚೆ' *

*ಚೆ= ಚೆಗವಾರ

— ಮೋಹನ್ ಜಿ. ಎಸ್.

ನಿರುದ್ಯೋಗಿಗಳ ಪರವಾಗಿಯೂ ಕಾರ್ಮಿಕ ಸಂಘಗಳು ಹೋರಾಟ ನಡೆಸಬೇಕು

— ಬಿ. ಟಿ. ರಣದಿವೆ



ಕಳೆದ ವಾರ ಮಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ 4 ನೆಯ ಸಮ್ಮೇಳನದ ಸಂಕ್ಷಿಪ್ತ ವರದಿಯನ್ನು ಪ್ರಕಟಿಸಿದ್ದೆವು. ಈ ಸಂಚಿಕೆಯಲ್ಲಿ ಕಾ. ಬಿ. ಟಿ. ರಣದಿವೆ ಅವರು ಮೇ 14 ರಂದು ಸಿಐಟಿಯು ಸಮ್ಮೇಳನವನ್ನು ಉದ್ಘಾಟಿಸಿ ಮಾಡಿದ ಭಾಷಣದ ಕನ್ನಡ ಅನುವಾದವನ್ನು ಪ್ರಕಟಿಸುತ್ತಿದ್ದೇವೆ.

ಹರಿಹರದಲ್ಲಿ ಜರುಗಿದ ಸಮ್ಮೇಳನದ ನಂತರ ಹಲವು ಹೋರಾಟಗಳು ನಡೆದಿವೆ, ಹಲವು ವಿಜಯಗಳು ದೊರೆತಿವೆ. ನಮ್ಮ ಸಂಘಟನೆ ಬೆಳೆದಿದೆ. ಹೊಸ ಸಂಘಗಳು ಸಿಐಟಿಯು ಸೇರಿವೆ. ರಾಜ್ಯದ ಕಾರ್ಮಿಕ ಚಳುವಳಿಯಲ್ಲಿ ಸಿಐಟಿಯು ಒಂದು ಮಹತ್ವಪೂರ್ಣ ಶಕ್ತಿಯಾಗಿ ಮೂಡಿ ಬಂದಿದೆ. ವಿಶೇಷತಃ ಮೈಕೋ ಕಾರ್ಮಿಕರ ನಡುವೆ ನಮ್ಮ ವಿಜಯಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಕಾರ್ಮಿಕರು ತಮ್ಮ ಅಭ್ಯರ್ಥಿಯನ್ನು ಆರಿಸಲು ನ್ಯಾಯಾಲಯದ ಆಜ್ಞೆಯಿಂದ ಮಾತ್ರ ಸಾಧ್ಯವಾಯಿತು ಎಂಬುದು ಕಾಂಗ್ರೆಸ್ (ಐ)ನ ಪ್ರಜಾಪ್ರಭುತ್ವ ಯಾವ ರೀತಿಯದ್ದು ಎಂಬುದನ್ನು ತೋರಿಸುತ್ತದೆ.

ನಮ್ಮ ವಿಜಯಗಳಿಗೆ, ಗೆಲುವುಗಳಿಗೆ ಕಾರಣ ಕಾರ್ಮಿಕ ವರ್ಗದ ಹೋರಾಟಗಳಲ್ಲಿ ಎರಡು ಪರಸ್ಪರ ವಿರುದ್ಧವಾದ ಶಕ್ತಿಗಳಿವೆ ಎಂಬುದನ್ನು ಗುರುತಿಸಿಕೊಂಡು, ಅದರಲ್ಲಿ ಎಡೆಬಿಡದೆ ಕಾರ್ಮಿಕ ವರ್ಗದ ಹಿತಾಸಕ್ತಿಗಳ ರಕ್ಷಣೆಗೆ ನಿಲ್ಲುವ ನಮ್ಮ ನಿಲುವು ಎಂಬುದರಲ್ಲಿ ಸಂಶಯವಿಲ್ಲ. ಜತೆಗೆ ನಾವು ಕಾರ್ಮಿಕ ಸಂಘಗಳ ಒಗ್ಗಟ್ಟಿಗಾಗಿ ನಡೆಸುತ್ತಿರುವ ಪ್ರಾಮಾಣಿಕ ಪ್ರಯತ್ನಗಳೂ ಇದಕ್ಕೆ ಕಾರಣ.

ಆದರೆ ಕೇವಲ ಸರಿಯಾದ ನಿಲುವು, ಸರಿಯಾದ ಸಿದ್ಧಾಂತ ಮಾತ್ರದಿಂದ ಉಪಯೋಗವಿಲ್ಲ. ಅದಕ್ಕಾಗಿ ಎಂತಹ ಕಷ್ಟ ನಷ್ಟಗಳನ್ನಾದರೂ ಎದುರಿಸಲು, ತ್ಯಾಗಮಾಡಲು ಸಿದ್ಧರಿರುವ ಕಾರ್ಮಿಕರು, ಜನತೆ ಅಗತ್ಯ. ಮಾರ್ಕ್ಸ್ ಅಂದಿರುವಂತೆ "ಸಿದ್ಧಾಂತ ಜನಸಮೂಹದಲ್ಲಿ ಆಳವಾಗಿ ನೆಲೆಗೊಂಡಾಗ ಅದು ಒಂದು ಭೌತಿಕ ಶಕ್ತಿಯಾಗಿ ಬಿಡುತ್ತದೆ." ಆದ್ದರಿಂದ ನಮ್ಮ ವಿಜಯ, ಗೆಲುವು ದೀರ್ಘಕಾಲ ಊಟ-ತಿಂಡಿ ತೊರೆದು, ಪೋಲೀಸ್ ಹಿಂಸೆ, ಆಡಳಿತದ ದಮನವನ್ನು ಎದುರಿಸಿದ ಕಾರ್ಯಕರ್ತರ ಮತ್ತು ನಾಯಕರ ತ್ಯಾಗ, ಬಲಿದಾನಗಳಿಲ್ಲದೆ ಸಾಧ್ಯವಾಗುತ್ತಿರಲಿಲ್ಲ.

ರಾಜಕೀಯ ಬದಲಾವಣೆ

ಕಳೆದ ಸಮ್ಮೇಳನದ ನಂತರ ಹಲವು ಬದಲಾವಣೆಗಳಾಗಿವೆ. ಎರಡು ವರ್ಷಗಳ ಹಿಂದೆ ಕರ್ನಾಟಕದ ಕಾರ್ಮಿಕ ವರ್ಗ ಮತ್ತು ಜನತೆ ಕಾಂಗ್ರೆಸ್ [ಐ] ಪಕ್ಷವನ್ನು ಅಧಿಕಾರದಿಂದ ಹೊರದೂಡಿ, ಅದರ ಒಂದು ಭದ್ರಕೋಟೆಯನ್ನು ನಾಶಗೊಳಿಸಿದೆ. ಅದಕ್ಕಾಗಿ ಅಭಿನಂದನೆಗಳು. ಆದರೆ ಈ ಮಹತ್ವಪೂರ್ಣವಾದ ಗೆಲುವು, ಸ್ವಲ್ಪ ಮಟ್ಟಿಗೆ ದುರ್ಬಲವಾದದ್ದು ಎಂದೇ ಹೇಳಬೇಕಾಗುತ್ತದೆ. ಕಾರ್ಮಿಕ ವರ್ಗಗಳ ಎಡಪಕ್ಷಗಳ ಪ್ರಾತಿನಿಧ್ಯ ವಿಧಾನಮಂಡಲದಲ್ಲಿ ಜನತಾ ಸರಕಾರದ ಮೇಲೆ ಪ್ರತಿಕ್ರಿಯಾವಾದಿ ಶಕ್ತಿಗಳ ಒತ್ತಡವನ್ನು ಎದುರಿಸುವಷ್ಟು ಬಲಯುತವಾಗಿಲ್ಲ. ಪ್ರತಿಯೊಂದು ಹೆಜ್ಜೆಯಿಡುವಾಗಲೂ ಬಿ.ಜೆ.ಪಿ. ಯನ್ನು ತನ್ನ ಪರವಾಗಿಯೇ ಇಟ್ಟುಕೊಳ್ಳಬೇಕಾದ ಜನತಾ ಸರಕಾರ ಅದರಿಂದಾಗಿಯೇ ಜನತೆ ನಿರೀಕ್ಷಿಸುವ ವೇಗದಲ್ಲಿ ಪ್ರಗತಿ ಸಾಧಿಸಲಾರದಾಗುತ್ತಿದೆ. ಈ ರೀತಿ ಪ್ರತಿಕ್ರಿಯಾವಾದಿ ಶಕ್ತಿಗಳ ದುಷ್ಪ್ರಭಾವವನ್ನು ತಡೆಯಬೇಕಾದರೆ ಸಾಮೂಹಿಕ ಚಳುವಳಿ, ಸಾಮೂಹಿಕ ಸಂಘಟನೆಗಳನ್ನು ಬಲಗೊಳಿಸಬೇಕು.

ಇದೇ ಹೊತ್ತಿನಲ್ಲಿ ಅಧಿಕಾರದಿಂದ ಹೊರದಬ್ಬಲ್ಪಟ್ಟ ಕಾಂಗ್ರೆಸ್ [ಐ] ಜನತಾ ಸರಕಾರವನ್ನು ಉರುಳಿಸಲು ನಡೆಸುತ್ತಿರುವ ಕುಟಿಲೋಪಾಯಗಳನ್ನು ವಿಫಲಗೊಳಿಸಬೇಕಾಗಿದೆ. ಪಶ್ಚಿಮ ಬಂಗಾಲ ಮತ್ತು ಇತರೆಡೆ ಮಾಡಿದಂತೆ ಕರ್ನಾಟಕದಲ್ಲೂ ರಾಜ್ಯಪಾಲರ ಹುದ್ದೆಯ ದುರುಪಯೋಗ ನಡೆಯುವ ಸಾಧ್ಯತೆಯೂ ಇದೆ. ಪಶ್ಚಿಮ ಬಂಗಾಳದ ವಿಧಾನ ಸಭೆಯಲ್ಲಿ ಸಮಾಜಘಾತಕ ಶಕ್ತಿಗಳ ಮಾದರಿಯಲ್ಲಿ ವರ್ತಿಸಿದ ಕಾಂಗ್ರೆಸ್ (ಐ)ನವರು, ಕರ್ನಾಟಕದಲ್ಲಿ ಪಕ್ಷಾಂತರ ನಡೆಸುತ್ತಿದ್ದಾಗ ಸಿಕ್ಕಿ ಬಿದ್ದಿದ್ದಾರೆ. ಕೇಂದ್ರದಲ್ಲಿ ಜನತೆಯ ಹಕ್ಕುಗಳನ್ನು ಅದರ ಸರಕಾರ ಮೊಟಕುಗೊಳಿಸುತ್ತಿದ್ದರೂ, ರಾಜ್ಯದಲ್ಲಿ ಕಾಂಗ್ರೆಸ್ (ಐ) ಜನತೆಯ ಹಕ್ಕುಗಳ ಬಗ್ಗೆ ಮಾತನಾಡುತ್ತಿದೆ. ತನ್ನ ಪಕ್ಷದ ಕೇಂದ್ರ ಸರಕಾರಕ್ಕೆ ಪಂಜಾಬಿನಲ್ಲಿ ಕಾನೂನು ವ್ಯವಸ್ಥೆ ಸ್ಥಾಪಿಸಲು ಸಾಧ್ಯವಾಗದಿದ್ದರೂ ರಾಜ್ಯದಲ್ಲಿ ಕಾನೂನು ವ್ಯವಸ್ಥೆಯ ಬಗ್ಗೆ ಬೊಬ್ಬಿಡಲಾಗುತ್ತಿದೆ. ಮುಂದಿನ ಚುನಾವಣಾ ದೃಷ್ಟಿಯಿಂದ ಸಂಕುಚಿತ ಭಾಷಾವಾದ, ಕೋಮುವಾದವನ್ನು ಬೆಂಬಲಿಸಲೂ ಕೂಡಾ ಅದು ಹಿಂಜರಿಯುವುದಿಲ್ಲ. ಇವೆಲ್ಲದರ ವಿರುದ್ಧ ಕಾರ್ಮಿಕರು ಹೋರಾಡಬೇಕಾಗಿದೆ. ಆದರೆ ಅದೇ ಹೊತ್ತಿಗೆ ಜನತಾ ಸರಕಾರ ಭೂ ಮಾಲಕ ವರ್ಗಗಳ ಹಿತರಕ್ಷಣೆಗೆ ಬಲಿಯಾಗಬಾರದು, ಆಡಳಿತದಲ್ಲಿ ತನಗೆ ಸಾಧ್ಯವಾದಷ್ಟು ಭ್ರಷ್ಟಾಚಾರವನ್ನು ತೊಲಗಿಸಲು ಪ್ರಯತ್ನಿಸಬೇಕೆಂದು ಕಾರ್ಮಿಕರು ನಿರೀಕ್ಷಿಸುತ್ತಾರೆ.

ದುರ್ಭರ ಅವಧಿ

ಕಳೆದ ಸಮ್ಮೇಳನದ ನಂತರದ ಅವಧಿ ಭಾರತದ ಕಾರ್ಮಿಕರು ಮತ್ತು ಜನತೆಗೆ ಸ್ವಾತಂತ್ರ್ಯದಿಂದೀಚೆಗಿನ ವರ್ಷಗಳಲ್ಲಿ ಅತೀ ಸಂಕಷ್ಟಮಯವಾದ ಅವಧಿ. 1930 ರಲ್ಲಿ ಬ್ರಿಟಿಷ್ ಆಳ್ವಿಕೆಯ ಕಾಲದ ಬಿಕ್ಕಟ್ಟಿನ ಸಮಯಕ್ಕಿಂತಲೂ ಎಷ್ಟೋ ಪಾಲು ಹೆಚ್ಚು ದುರ್ಭರವಾದ ದಿನಗಳಿವು. ಹಲವಾರು ಕೈಗಾರಿಕೆಗಳು ಮುಚ್ಚುತ್ತಿವೆ; ಸಣ್ಣ ಕೈಗಾರಿಕೆಗಳ ಸಾಮೂಹಿಕ ಹತ್ಯೆ ನಡೆಯುತ್ತಿದೆ; ಲಾಕೌಟುಗಳು ಕೊನೆಯಿಲ್ಲದಂತೆ ಮುಂದುವರಿಯುತ್ತಿವೆ. ಇವೆಲ್ಲವುಗಳಿಂದ ಸಾವಿರಾರು ಕಾರ್ಮಿಕರು ಹೊಟ್ಟೆಗಿಲ್ಲದೆ ಬೀದಿಪಾಲಾಗುತ್ತಿದ್ದಾರೆ. ಆದರೂ ಮಧ್ಯ ಪ್ರವೇಶಿಸಲು ಕಾಂಗ್ರೆಸ್ (ಐ) ಸರಕಾರ ನಿರಾಕರಿಸುತ್ತಿದೆ. ಪ್ರಮುಖ ರಂಗಗಳಲ್ಲಿ ಉತ್ಪಾದನೆ ಇಳಿಯುತ್ತಿದೆ. ಯೋಜನಾ ಆಯೋಗ ಹಾಕಿಕೊಂಡ ಗುರಿಗಳು ಯಾವುವೂ ಸಾಧಿತವಾಗುತ್ತಿಲ್ಲ. ನಿರುದ್ಯೋಗ ಮಾತ್ರ ಏರುತ್ತಾ ಹೋಗುತ್ತಿದೆ. ವಾಸ್ತವವಾಗಿ ದೇಶದಲ್ಲಿ ಯೋಜನಾ ಚಟುವಟಿಕೆ ಸಂಪೂರ್ಣವಾಗಿ ಮುರಿದು ಬಿದ್ದಿದೆ. ಜನತೆ ಯೋಜನಾ ಆಯೋಗದಿಂದ ಈಗ ಏನನ್ನೂ ನಿರೀಕ್ಷಿಸುವಂತಿಲ್ಲ.

ಸರಕಾರ ಏನೇ ಹೇಳಿಕೊಂಡರೂ, ಬೆಲೆಯೇರಿಕೆ ತಡೆಯಲು ಅದಕ್ಕೆ ಆಗುತ್ತಿಲ್ಲ. ಈ ಅಗಾಧ ಬೆಲೆಯೇರಿಕೆಯ ಮುಖ್ಯ ಹೊರೆ ಹೊರಬೇಕಾದವರು ಅಸಂಘಟಿತ ಕಾರ್ಮಿಕರು, ಸಣ್ಣ ಪ್ರಮಾಣದ ಉತ್ಪಾದಕರು, ರೈತರು ಹಾಗೂ ಸರಕಾರದ ತಪ್ಪು ಜೀವನ ವೆಚ್ಚ ಸೂಚ್ಯಂಕದ ಪ್ರಕಾರವಷ್ಟೇ ತುಟ್ಟಿಭತ್ಯೆ ಪಡೆಯುವ ಕಾರ್ಮಿಕರು.

ಈ ಪರಿಸ್ಥಿತಿಯಲ್ಲಿ ಬೆಲೆಯೇರಿಕೆ ತಡೆಯುವ ಬದಲು ಕೇಂದ್ರ ಸರಕಾರ ತುಟ್ಟಿಭತ್ಯದ ಮೇಲೆ ಹಲ್ಲೆ ನಡೆಸುತ್ತಿದೆ. ತನ್ನ ನೌಕರರಿಗೆ ಕೊಡಬೇಕಾದ ತುಟ್ಟಿಭತ್ಯವನ್ನು ತಡೆಹಿಡಿಯಲು ತನಗೆ ಹಕ್ಕಿದೆ ಎಂದು ಅದು ವಾದಿಸುತ್ತಿದೆ. ಈ ರೀತಿ ತುಟ್ಟಿಭತ್ಯ ನೀಡಿಕೆ ಸರಕಾರದ ಮನಸೋಇಚ್ಛೆ ನಡೆಯುವಂತಾದರೆ, ಈ ಮೂಲಕ ತುಟ್ಟಿ ಭತ್ಯವನ್ನು ಸ್ತಂಭನಗೊಳಿಸುವಲ್ಲಿ ಅದು ಯಶಸ್ವಿಯಾದರೆ ಈ ಅಪಾಯ ಸಾರ್ವಜನಿಕ ವಲಯದ ಹಾಗೂ ಖಾಸಗೀ ಕೈಗಾರಿಕೆಗಳಿಗೂ ಹರಡಲು ಹೆಚ್ಚು ಸಮಯ ಬೇಕಾಗುವುದಿಲ್ಲ.

ನಿರುದ್ಯೋಗ ಸಮಸ್ಯೆ

ದೇಶದ ಆರ್ಥಿಕ ಪರಿಸ್ಥಿತಿ ಎಷ್ಟೊಂದು ಹದಗೆಟ್ಟಿದೆಯೆಂಬುದು ಭಾರತ ಸರಕಾರದ ಆರ್ಥಿಕ ಸರ್ವೇಕ್ಷಣೆಯಿಂದ ಕಂಡುಬರುತ್ತದೆ. ದೇಶ ಸಾಕಷ್ಟು ಉತ್ಪಾದನಾ ಬೆಳವಣಿಗೆ ಹೊಂದಿ, ನಿರುದ್ಯೋಗಿಗಳಾದ ಅಸಂಖ್ಯಾತ ಜನರಿಗೆ ಉದ್ಯೋಗಾವಕಾಶ ನಿರ್ಮಾಣಗೊಳ್ಳಬೇಕಾದರೆ ದೇಶದ ಕೈಗಾರಿಕೆಗಳು ವಾರ್ಷಿಕವಾಗಿ 7 ಅಥವಾ 8 ಶೇಕಡಾ ದರದಲ್ಲಿ ಬೆಳೆಯಬೇಕು ಎಂದು ಆ ಸರ್ವೇಕ್ಷಣೆ ಹೇಳುತ್ತದೆ. ಆದರೆ ಸರಕಾರದ ಈಗಿನ ಧೋರಣೆಗಳಿಂದ ದೇಶ ಈ ದರವನ್ನು ಸಾಧಿಸುವುದು ಎಂದೂ ಸಾಧ್ಯವಿಲ್ಲ. 1983-84 ರಲ್ಲಿ ಸಾಧಿಸಿದ ಅತೀ ಹೆಚ್ಚು ದರವೆಂದರೆ 4.5 ಶೇಕಡಾ. ಬಂಡವಾಳಶಾಹೀ ದಾರಿಯಲ್ಲಿ ಕೇವಲ 5 ಶೇಕಡಾ ಹೆಚ್ಚಳವನ್ನು ಸಾಧಿಸುವುದೂ ಕೂಡಾ ಸಾಧ್ಯವಿಲ್ಲ. ಆದ್ದರಿಂದ ನಿರುದ್ಯೋಗದ ಪರಿಸ್ಥಿತಿ ಇನ್ನಷ್ಟು ಹದಗೆಡಲಿದೆ. ದೇಶದ ಕಾರ್ಮಿಕ ಆಂದೋಲನ ಇದನ್ನು ಎದುರಿಸಬೇಕಾಗಿದೆ.

ನಮ್ಮ ಸಿಐಟಿಯು ಸಂಘಗಳು ಮತ್ತು ಇತರ ಎಲ್ಲಾ ಸಂಘಟನೆಗಳು ಈ ಸಮಸ್ಯೆಯನ್ನು ನಿರ್ಲಕ್ಷಿಸುತ್ತಲೇ ಇವೆ. ಕೇವಲ ಉದ್ಯೋಗಸ್ಥ ಕಾರ್ಮಿಕರ ಅವಶ್ಯಕತೆಗಳತ್ತ ಮಾತ್ರ ಗಮನ ಹರಿಸುತ್ತಿದ್ದಾರೆ. ಇದರಿಂದ ಉದ್ಯೋಗಸ್ಥರು ಹಾಗೂ ನಿರುದ್ಯೋಗಸ್ಥರು ಹೀಗೆ ಕಾರ್ಮಿಕ ವರ್ಗದಲ್ಲಿ ಒಡಕು ಉಂಟಾಗಿ ಅದನ್ನು ಕಾರ್ಮಿಕ ವರ್ಗದ ಸೌಹಾರ್ದತೆಯನ್ನು ಮುರಿಯಲು ಮಾಲಕರು ಉಪಯೋಗಿಸುತ್ತಾರೆ. ನಿರುದ್ಯೋಗಸ್ಥರಾಗಿರುವವರಲ್ಲಿ ಹೆಚ್ಚಿನವರು ಯುವಕರಾದ್ದರಿಂದ ಅವರಿಗಿನ್ನೂ ಕಾರ್ಮಿಕ ಸಂಘಟನೆಯ ಪ್ರಜ್ಞೆಯಿಲ್ಲದಿರುವುದರಿಂದ ಅವರನ್ನು ದಿಕ್ಕುಗೆಡಿಸುವುದು ಸಂಕುಚಿತವಾದಿಗಳಿಗೆ ಸುಲಭ. ಇದೇ ರೀತಿ ನಿರುದ್ಯೋಗಿಗಳ ಸಂಖ್ಯೆ ಅಪಾರವಾಗಿರುವಾಗ ಹೊಸದಾಗಿ ಕೆಲಸಕ್ಕೆ ಸೇರಿದ ಕಾರ್ಮಿಕರೂ ಕೂಡಾ ನರಕಯಾತನೆ ಅನುಭವಿಸಬೇಕಾಗುತ್ತದೆ. ನಮ್ಮ ಕಾರ್ಮಿಕ ಸಂಘಗಳು ಕೇವಲ ಖಾಯಂ ಕಾರ್ಮಿಕರ ಸಂಬಳ-ಸಾರಿಗೆ ಬಗ್ಗೆ ಯಷ್ಟೇ ಗಮನ ಹರಿಸುವುದರಿಂದಾಗಿ ಇಲ್ಲಿಯೂ ಯುವಕ ಕಾರ್ಮಿಕರು ಕಾರ್ಮಿಕ ಸಂಘಗಳ ಹೋರಾಟದಿಂದ ದೂರವುಳಿಯುತ್ತಾರೆ.

ಮೂಲಭೂತ ಹಕ್ಕಾಗಲಿ

ಆದ್ದರಿಂದ ನಾವು ನಿರುದ್ಯೋಗಸ್ಥರು ಹಾಗೂ ಉದ್ಯೋಗಸ್ಥ ಕಾರ್ಮಿಕರು ಇಬ್ಬರ ಪರವಾಗಿಯೂ ಹೋರಾಡಬೇಕಾಗಿದೆ. ನಿರುದ್ಯೋಗ ವೇತನಕ್ಕಾಗಿ ಸತತ ಹೋರಾಟ ನಡೆಸಬೇಕಾಗಿದೆ; ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿಸಬೇಕೆಂದು ಕಾರ್ಮಿಕರೆಲ್ಲರೂ ಒತ್ತಾಯಿಸುವಂತೆ ಅವರಲ್ಲಿ ಪ್ರಜ್ಞೆ, ಸ್ಫೂರ್ತಿ ತುಂಬಬೇಕಾಗಿದೆ. ಜಗತ್ತಿನ ಯಾವ ಬೂರ್ಜ್ವಾ ಸಂವಿಧಾನವೂ ಈ ಹಕ್ಕನ್ನು ನೀಡಿಲ್ಲ, ಕೇವಲ ಸಮಾಜವಾದಿ ಸಂವಿಧಾನಗಳು ಮಾತ್ರ ಈ ಹಕ್ಕು ನೀಡಿವೆ ಎಂಬುದನ್ನೂ ಕಾರ್ಮಿಕರಿಗೆ ತಿಳಿ ಹೇಳಬೇಕು.

ಸಂಗಾತಿಗಳೇ,

ನಾನು ನಿರುದ್ಯೋಗಸ್ಥರ ಈ ಪ್ರಶ್ನೆಯ ಬಗ್ಗೆ ಹೆಚ್ಚು ಒತ್ತುಕೊಟ್ಟು ಹೇಳುತ್ತಿದ್ದೇನೆ. ಯಾಕೆಂದರೆ ಬೂರ್ಜ್ವಾ ಪಕ್ಷಗಳು, ಭಾಷಾಂಧರು ಕೋಮು ಪ್ರತಿಕ್ರಿಯಾವಾದಿಗಳು ಮತ್ತು ವಿದೇಶೀ ಹಸ್ತಕರು ಈ ಸಮಸ್ಯೆಯ ದುರ್ಲಾಭ ಪಡೆದು "ಮಣ್ಣಿನ ಮಕ್ಕಳು" ಇತ್ಯಾದಿ ಘೋಷಣೆಗಳ ಮೂಲಕ ಕಾರ್ಮಿಕ ವರ್ಗದಲ್ಲಿ ಮಾತ್ರವಲ್ಲ, ರಾಜ್ಯ – ರಾಜ್ಯಗಳ ನಡುವೆ, ಕೋಮು–ಕೋಮುಗಳ ನಡುವೆ ಒಡಕು ತಂದು ದೇಶದ ಐಕ್ಯತೆಯನ್ನೂ ಮುರಿಯುತ್ತಿದ್ದಾರೆ. ಶಿವಸೇನೆಯ ಉದಯಕ್ಕೆ, ಅಸ್ಸಾಂ ಮತ್ತು ಪಂಜಾಬಿನ ಪ್ರತ್ಯೇಕತಾವಾದಿ ಶಕ್ತಿಗಳಿಗೆ ಅವಕಾಶವಾಗಲು ಇದೇ ಕಾರಣ. ಇತ್ತೀಚೆಗೆ

ಕರ್ನಾಟಕದಲ್ಲೂ ಇಂತಹ ಗಲಭೆಗಳ ಅಪಾಯ ತಲೆದೋರಿತ್ತು.

ಇನ್ನಷ್ಟು ಹಲ್ಲೆಗಳು

ಸಂಗಾತಿಗಳೇ, ಸರಕಾರ ಮತ್ತು ಮಾಲಕರು ಕಾಮಿಕರು ಮತ್ತು ನೌಕರರ ಮೇಲೆ ಇನ್ನಷ್ಟು ಹಲ್ಲೆ ನಡೆಸಲು ಸಿದ್ಧರಾಗುತ್ತಿದ್ದಾರೆ. ಕೇಂದ್ರ ಸರಕಾರದ ಇಲಾಖೆಗಳಲ್ಲಿ ನಿವೃತ್ತಿಯಿಂದ ತೆರವಾದ ಸ್ಥಾನಗಳನ್ನು ಭರ್ತಿ ಮಾಡುತ್ತಿಲ್ಲ. ಶ್ರಮಭಾರ ಹೆಚ್ಚಿಸಲಾಗುತ್ತಿದೆ. ಕೈಗಾರಿಕೆಯ ಆಧುನೀಕರಣ, ಕಂಪ್ಯೂಟರೀಕರಣ, ಗಣಕೀಕರಣ ಇತ್ಯಾದಿ ಹೆಸರಲ್ಲಿ ಲಕ್ಷಗಟ್ಟಲೆ ಉದ್ಯೋಗಾವಕಾಶಗಳನ್ನು ನಾಶಮಾಡಲಾಗುತ್ತಿದೆ.

ಆರ್ಥಿಕ ಹಿಂಜರಿತದಿಂದ ಉಂಟಾದ ಬಿಕ್ಕಟ್ಟಿನಿಂದ ಪಾರಾಗಲು ಸರಕಾರ ಕಾರ್ಮಿಕ ವರ್ಗದ ಕುಟುಂಬಗಳಿಗೆ ಜೀವನಾಧಾರವನ್ನೂ ನಿರಾಕರಿಸುತ್ತಿದೆ. ಯಾಕೆಂದರೆ ಬಂಡವಾಳಶಾಹೀ ಜಗತ್ತಿನ ಮೇಲೆ ಭಾರತದ ಅವಲಂಬನೆ, ಅದು ಹಿಡಿದಿರುವ ಬಂಡವಾಳಶಾಹಿ ಪಥದಿಂದಾಗಿ ಪಾಶ್ಚಾತ್ಯ ದೇಶಗಳಂತೆ ಇಲ್ಲೂ ಅಗಾಧ ನಿರುದ್ಯೋಗವಿರುವುದು ಅನಿವಾರ್ಯದಂತಾಗಿದೆ

ಸಮಾಜವಾದ ಅನಿವಾರ್ಯ

ಆದರೆ ಈ ಅಗಾಧ ನಿರುದ್ಯೋಗ, ಬಡಜನತೆಯ ಬವಣೆಗಳು ಗುತ್ತೇದಾರಿಗಳ ಲಾಭಗಳಿಕೆಯನ್ನು, ಬಂಡವಾಳದ ಮತ್ತು ಸಂಪತ್ತಿನ ಶೇಖರಣೆಯನ್ನೇನೂ ಕಮ್ಮಿ ಮಾಡಿಲ್ಲ. ಬದಲಾಗಿ ಅದು ಅಗಾಧ ಪ್ರಮಾಣದಲ್ಲಿ ಏರಿದೆಯೆಂಬುದಕ್ಕೆ ಗುತ್ತೇದಾರಿ ಮನೆಗಳ ಸಂಪತ್ತಿನ ಹೆಚ್ಚಳದ ಅಂಕೆ – ಸಂಖ್ಯೆಗಳ ಸಾಕ್ಷಿ. ಇದು ಚಿತ್ರದ ಇನ್ನೊಂದು ಮಗ್ಗಲು. ಅತ್ಯಂತ ಬಡಜನತೆಯನ್ನು ಅಭಾವದ ದವಡೆಯಲ್ಲಿರಿಸುವುದೇ ಶ್ರೀಮಂತರ ಸಂಪತ್ತಿನ ಆಧಾರ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆ.

ಕೆಲವೇ ಕೈಗಳಲ್ಲಿ ಹೆಚ್ಚೆಚ್ಚು ಸಂಪತ್ತಿನ ಶೇಖರಣೆ, ವಿಶಾಲ ಜನಸಮೂಹಕ್ಕೆ ಬಡತನ – ಇದು ಬಂಡವಾಳಶಾಹೀ ಸಮಾಜದ ನಿಯಮ. ಉತ್ಪಾದನಾ ಸಾಧನಗಳನ್ನು ಖಾಸಗೀ ಕೈಗಳಿಂದ ಬಿಡಿಸಿ ಅದನ್ನು ಸಾಮಾಜಿಕ ಆಸ್ತಿಯನ್ನಾಗಿ ಮಾಡದಿದ್ದಲ್ಲಿ ಏನು ಮಾಡಲು ಸಾಧ್ಯವಿಲ್ಲ. ಸಮಾಜವಾದವೆಂದರೆ ಇದೇ. ಕಾರ್ಮಿಕರು ಇದಕ್ಕಾಗಿ ಎಡೆಬಿಡದ ಹೋರಾಟ ನಡೆಸಬೇಕಾಗಿದೆ. ಇಲ್ಲವಾದರೆ ಗುಲಾಮರಂತೆ ಶೋಷಣೆಗೊಳಗಾಗಬೇಕಾಗುತ್ತದೆ. ಆದ್ದರಿಂದ ಟಾಟಾ, ಬಿರ್ಲಾಗಳ ತಿಜೋರಿಗಳನ್ನು ತುಂಬಿಸುವ ಇಂದಿರಾಗಾಂಧಿಯವರ ಸಮಾಜವಾದದ ಮತ್ತು ವ್ಯಾಪಾರಿಗಳು ಭೂಮಾಲೀಕರೂ, ಬಂಡವಾಳಶಾಹಿಗಳು, ಹಾಗೂ ಪಾಳೇಯಗಾರೀ ಆಳರಸರುಗಳು, ಮುಂತಾದ ಎಲ್ಲಾ ಆಸ್ತಿವಂತರಿಗೂ, ಸಾಷ್ಟಾಂಗವೆರಗುವ ಬಿ. ಜೆ. ಪಿ. ಯ ಗಾಂಧೀ ಸಮಾಜವಾದದ ಕಪಟತನವನ್ನು ಕಾರ್ಮಿಕರು ಮನಗಾಣಬೇಕಾಗಿದೆ.

ನಾಚಿಕೆಗೇಡಿನ ವರ್ತನೆ

ಕಾರ್ಮಿಕ ಸಂಘಗಳು ಪಡೆದಿರುವ ರಿಯಾಯ್ತಿಗಳನ್ನೆಲ್ಲಾ ನಿರಾಕರಿಸಲು ಸರಕಾರ ದಮನ ಮತ್ತು ಕಾನೂನು ಬಾಹಿರ ಕ್ರಮ ಕೈಗೊಳ್ಳುತ್ತಿದೆ, ಮಾತ್ರವಲ್ಲ ನಗ್ನ ವಂಚನೆ ಮತ್ತು ಒಪ್ಪಂದಗಳನ್ನು ಮುರಿಯುವ ಮಟ್ಟದವರೆಗೆ ಅದು ಇಳಿಯುತ್ತಿದೆ. ತುಟ್ಟಿ ಭತ್ಯದ ದರದ ಬಗ್ಗೆ ಭೂತಲಿಂಗಂ ಸಲಹೆಯ ಮರುಪರಿಶೀಲನೆಗೆ ಹಿಂದೇಟು ಮತ್ತು ಕಲ್ಲಿದ್ದಲು ಕೈಗಾರಿಕೆಯಲ್ಲಿ ಆಗಿರುವ ಒಪ್ಪಂದದ ಒಂದು ಷರತ್ತನ್ನು ಮುರಿಯುತ್ತಿರುವುದು ಇದಕ್ಕೆ ಉದಾಹರಣೆಗಳು.

ಸಂಗಾತಿಗಳೇ, ಸರಕಾರ ಮತ್ತು ಮಾಲಕರು ಪೀಡಿಸಲಾರಂಭಿಸಿರುವ ಇನ್ನೊಂದು ಹಲ್ಲೆಯ ಬಗ್ಗೆ ನಿಮಗೆ ಎಚ್ಚರಿಕೆ ನೀಡಬಯಸುತ್ತೇನೆ. ಕಲ್ಲಿದ್ದಲು ಕೈಗಾರಿಕೆಯ ಆಡಳಿತವರ್ಗ ಮತ್ತು ಕೋಟಾದಲ್ಲಿ ಕುಪ್ರಸಿದ್ಧ ಸಿಂಘಾನಿಯಾ ಒಂದು ದಿನದ ಮುಷ್ಕರಕ್ಕೆ ಏಳು ದಿನದ ವೇತನವನ್ನು ಮುರಿದುಕೊಳ್ಳುವ ರಾಕ್ಷಸೀ ಕ್ರಮ ಕೈಗೊಂಡಿದ್ದಾರೆ. ಬ್ರಿಟಿಷ್ ದಮನಕಾರರು ತಮ್ಮ ಆಳ್ವಿಕೆಯ ವಿರುದ್ಧ ಕಾರ್ಮಿಕ ವರ್ಗ ಸೊಲ್ಲೆತ್ತದಂತೆ ಮಾಡಲು ಜಾರಿಗೊಳಿಸಿದ್ದ ಈ ಕ್ರಮವನ್ನು ಕಾಂಗ್ರೆಸ್ (ಐ) ಸರಕಾರ ಬಳಸುತ್ತಿರುವುದು ಅತ್ಯಂತ ನಾಚಿಕೆಗೇಡಿನ ವಿಷಯ. ಇದನ್ನು ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಎನ್. ಸಿ. ಸಿ. ಪ್ರತಿಭಟಿಸಿ ಒಂದು ಅಖಿಲ ಭಾರತ ಕಾರ್ಯಾಚರಣೆ ನಡೆಸಬೇಕು.

ನಮ್ಮ ಕರ್ತವ್ಯ

ಯುದ್ಧ ಮತ್ತು ಶಾಂತಿಯ ಮುಖ್ಯ ಪ್ರಶ್ನೆಯನ್ನು ನಮ್ಮ ಕಾರ್ಮಿಕ ಸಂಘಗಳು ಮತ್ತು ನಮ್ಮ ಸಮಸ್ತ ಕಾರ್ಮಿಕ ಆಂದೋಲನ ಇನ್ನೂ ಕೈಗೆತ್ತಿಕೊಂಡಿಲ್ಲ ಎಂಬ ಅರಿವು ನಮಗೆಲ್ಲರಿಗಿದೆ. ಜಗತ್ತಿನ ಕಾರ್ಮಿಕ ವರ್ಗದ, ಜನತೆಗಳಿಗೆ ಪ್ರತಿಯಾಗಿ ಭಾರತದ ಕಾರ್ಮಿಕ ವರ್ಗ ತನ್ನ ಕನಿಷ್ಠ ಕರ್ತವ್ಯವನ್ನು ನಿರ್ವಹಿಸಬೇಕಾದರೆ ಈ ದೌರ್ಬಲ್ಯವನ್ನು ನೀಗಬೇಕಾಗಿದೆ.

ನಾವು ಈಗಾಗಲೇ ಈ ಹಾದಿಯಲ್ಲಿ ಮುಂದುವರೆದಿದ್ದೇವೆ ನಮ್ಮ ಘಟಕಗಳು ಅಂದರೆ ಪಶ್ಚಿಮ ಬಂಗಾಲ, ಕೇರಳದ ಸಿ.ಐ.ಟಿ.ಯು. ಸಮಿತಿಗಳು ಮುಂತಾದವುಗಳು ಕಾರ್ಮಿಕ ಸಮೂಹದೆದುರು ಈ ಪ್ರಶ್ನೆಗಳನ್ನು ಪ್ರಸ್ತುತಪಡಿಸುತ್ತಿವೆ. ಈಗ ಇತರ ಶಕ್ತಿಗಳೂ ಈ ಕ್ಷೇತ್ರವನ್ನು ಪ್ರವೇಶಿಸಿ ನಮಗೆ ನೆರವು ನೀಡುತ್ತಿವೆ. ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ರಾಜಕೀಯ ಪಕ್ಷಗಳ ಶಾಂತಿ ಸಮ್ಮೇಳನ ಈ ಪ್ರಶ್ನೆಯನ್ನು ಜನತೆಯ ನಡುವೆ ಕೊಂಡೊಯ್ಯಲು ನಮಗೊಂದು ಅವಕಾಶ ನೀಡಿದೆ. ಕಾರ್ಮಿಕ ವರ್ಗ ಮತ್ತು ಇತರ ಜನ ವಿಭಾಗಗಳಲ್ಲಿ ಜಾಗೃತಿ ಮೂಡಿಸಲು ನಮ್ಮ ಸಂಘಗಳೆಲ್ಲಾ ಈ ಅವಕಾಶವನ್ನು ಬಳಸಿಕೊಳ್ಳಬೇಕು. ಬೂರ್ಜ್ವಾ ಮತ್ತು ಸುಧಾರಣಾವಾದಿ ಪ್ರಭಾವಗಳಿಂದಾಗಿ ನಮ್ಮ ಕಾರ್ಮಿಕ ವರ್ಗದಲ್ಲಿ ಬಂದಿರುವ ಅಂತರಾಷ್ಟ್ರೀಯತೆಯ ಅಭಾವವನ್ನು ಎದುರಿಸಿ ಕ್ರಮೇಣ ಸತತವಾಗಿ ಅದನ್ನು ನೀಗಿ ನಮ್ಮ ಕಾರ್ಮಿಕ ವರ್ಗ ಜಾಗತಿಕ ಶಾಂತಿ ಸೇನೆಯ ಶಕ್ತಿಶಾಲಿ ತುಕಡಿಯಾಗುವಂತೆ ಮಾಡಬೇಕಾಗಿದೆ.

ಕಾರ್ಮಿಕರ ಐಕ್ಯತೆ

ಕಾರ್ಮಿಕ ವರ್ಗದ ಮೇಲೆ ರಾಕ್ಷಸೀ ಹಲ್ಲೆ ಹಾಗೂ ತೀವ್ರಗೊಳ್ಳುತ್ತಿರುವ ನಿರುದ್ಯೋಗದ ವಿರುದ್ಧ ಸಿ.ಐ.ಟಿ.ಯು. ಹಾಗೂ ಅದರ ಸಂಘಗಳು ಎಡಬಿಡದೆ ಹೋರಾಟ ನಡೆಸಿದ್ದೇವೆ. ಸಿ.ಐ.ಟಿ.ಯು. ಕಾರ್ಮಿಕ ಸಂಘಗಳ ಐಕ್ಯತೆಗಾಗಿ ಶ್ರಮಿಸುತ್ತಲೇ ಇದೆ. ರಾಷ್ಟ್ರೀಯ ಆಂದೋಲನ ಸಮಿತಿ (ಎನ್. ಸಿ.ಸಿ) ಹೆಚ್ಚೆಚ್ಚಾಗಿ ಆಂದೋಲನದ ಒಗ್ಗಟ್ಟಿನ ಮುಖವಾಣಿಯಾಗಿ ಮೂಡಿಬರುತ್ತಿದೆ.

ಸರಕಾರದೊಡನೆ ಮಾತುಕತೆಗಳಲ್ಲಿ ಈ ಹೆಚ್ಚುತ್ತಿರುವ ಒಗ್ಗಟ್ಟಿನಿಂದಾಗಿ ಉಕ್ಕು, ಕಲ್ಲಿದ್ದಲು ಮತ್ತು ಇತರ ಕೈಗಾರಿಕೆಗಳಲ್ಲಿ ಹಲವು ಪ್ರಯೋಜನಕಾರೀ, ಲಾಭದ ಒಪ್ಪಂದಗಳಿಗೆ ಸಹಿ ಹಾಕುವುದು ಸಾಧ್ಯವಾಯಿತು. ಈ ಮಾತುಕತೆಗಳಲ್ಲಿ ಇಂಟಕ್ ಕೂಡಾ ಎನ್. ಸಿ.ಸಿ.ಯ ಘಟಕಗಳಿಗೆ ಬೆಂಬಲವಾಗಿ ನಿಂತಿತು. ಕಳೆದ ವರ್ಷದಲ್ಲಿ ಕಾರ್ಮಿಕ ಸಂಘಗಳ ಐಕ್ಯತೆಯಲ್ಲಿ ನಾವು ಹೊಸ ಯಶಸ್ಸು ಸಾಧಿಸಿದೆವು ಎಂದು ಹೇಳಬಹುದು. ಪಶ್ಚಿಮ ಬಂಗಾಳದ ಸೆಣಬು ಮುಷ್ಕರದಲ್ಲಿ, ಬಂದರು ಮತ್ತು ಹಡಗುಕಟ್ಟೆ ಕಾರ್ಮಿಕರ ಮುಷ್ಕರದಲ್ಲಿ ಅದನ್ನು ನಾವು ನೋಡಿದೆವು.

ಎನ್.ಸಿ.ಸಿ. ಯನ್ನು ಬಲಗೊಳಿಸಿ ಐಕ್ಯತೆಯ ಅಭೀಪ್ಸೆಯನ್ನು ವ್ಯಾಪಕಗೊಳಿಸಿದ್ದು ನಮ್ಮ ಹೋರಾಟ ನಿರತ ಕಾರ್ಮಿಕ ವರ್ಗ ಮತ್ತು ಸಂಘಗಳ ಮಹತ್ವಪೂರ್ಣ ಸಾಧನೆ.

ಈ ಐಕ್ಯತೆಯನ್ನು ಸರ್ವವ್ಯಾಪಕಗೊಳಿಸಿ, ಎಲ್ಲಾ ಕಾರ್ಮಿಕ ಸಂಘಗಳ ಕೇಂದ್ರಗಳ ಹಾಗೂ ಕೈಗಾರಿಕಾ ಒಕ್ಕೂಟಗಳ ಒಂದು ಮಹಾ ಒಕ್ಕೂಟದ ಮೂಲಕ ಅದಕ್ಕೊಂದು ಸ್ಥಿರ ಸ್ವರೂಪ ಕೊಡಲು ನಾವು ನಿರ್ಧರಿಸಬೇಕು. ಸರಕಾರೀ ಧೋರಣೆಗಳನ್ನು ಎದುರಿಸಿ ಜನತೆಯ ಹಿತಾಸಕ್ತಿಗಳಿಗನುಗುಣವಾಗಿ ಅರ್ಥ ವ್ಯವಸ್ಥೆಯನ್ನು ನಡೆಸುವ ಧೋರಣೆಗಳನ್ನು ಪ್ರತಿಪಾದಿಸಲು ಅನುವಾಗುವಂತೆ ಕಾರ್ಮಿಕ ಆಂದೋಲನದ ಸಮಸ್ತ ಬಲವನ್ನು ಒಗ್ಗೂಡಿಸುವುದಕ್ಕಾಗಿ ಸಿ.ಐ.ಟಿ.ಯು ಇಂತಹ ಒಂದು ಮಹಾ ಒಕ್ಕೂಟದ್ದು ಬಗ್ಗೆ ಹೇಳುತ್ತಾ ಬಂದಿದೆ.

ಅರ್ಥ ವ್ಯವಸ್ಥೆಯ ನಿರ್ವಹಣೆ ಹಾಗೂ ಕೈಗಾರಿಕಾ ನಿರ್ವಹಣೆಯಲ್ಲಿ ತಾನು ಸಮಾನ ಸ್ಥಾನ-ಮಾನಕ್ಕಾಗಿ ಒತ್ತಾಯಿಸಬೇಕಾದ ಸಮಯವೀಗ ಬಂದಿದೆ.

ಖಾಸಗೀ ಕ್ಷೇತ್ರಗಳಲ್ಲಿ ಆಡಳಿತದ ಈ ಗುತ್ತೆದಾರಿಯಿಂದಾಗಿ ದಿವಾಳಿಕೋರ ಧೋರಣೆಗಳಿಂದಾಗಿ ಕಾರ್ಮಿಕ ವರ್ಗ ಮತ್ತು ನಮ್ಮ ಜನತೆ ಅಗಣಿತ ಸಂಕಷ್ಟಗಳನ್ನು ಎದುರಿಸಬೇಕಾಗಿ ಬಂದಿದೆ. ನಮ್ಮ ದೇಶದ ಮತ್ತು ನಮ್ಮ ಜನತೆಯ ಹಿತಾಸಕ್ತಿಗನುಗುಣವಾಗಿ ಕೈಗಾರಿಕೆ ಮತ್ತು ಅರ್ಥವ್ಯವಸ್ಥೆಯ ನಿರ್ವಹಣೆಯಲ್ಲಿ ಕಾರ್ಮಿಕರು ಸಮಾನ ಸ್ಥಾನಮಾನ ಮತ್ತು ಹಕ್ಕುಗಳಿಗಾಗಿ ಒತ್ತಾಯಿಸಬೇಕಾಗಿದೆ.

ಕೇಂದ್ರ — ರಾಜ್ಯ ಸಂಬಂಧ

ಕಾಂಗ್ರೆಸ್ (ಐ) ನ ಉರುಳಿಸುವ ಆಟವನ್ನು ವಿಫಲಗೊಳಿಸಿ ಪಶ್ಚಿಮ ಬಂಗಾಲದ ಎಡರಂಗ ಸರಕಾರದ ಧೀರ ರಕ್ಷಣೆಗೆ ಹೆಚ್ಚೆಚ್ಚು ಸಂಖ್ಯೆಯಲ್ಲಿ ನೆರವಾದ ಆ ರಾಜ್ಯದ ಕಾರ್ಮಿಕರು ಮತ್ತು ಸಿ. ಐ. ಟಿ. ಯು. ಸಂಘಗಳು ಶ್ಲಾಘನಾರ್ಹ.

ಎಡರಂಗವನ್ನು ಒಂಟಿಯಾಗಿಸುವ ಕಾಂಗ್ರೆಸ್ (ಐ)ನ ಪ್ರಯತ್ನಗಳು ಬಾರಿ ಬಾರಿಗೂ ವಿಫಲಗೊಂಡಿವೆ. ಇದಕ್ಕೆ ಕಾರಣ ಕಾರ್ಮಿಕರ ಮತ್ತು ಜನತೆಯ ರಾಜಕೀಯ ಜಾಗರೂಕತೆ.

ಎಡರಂಗ ಮತ್ತು ಕಾಂಗ್ರೆಸ್ (ಐ) ಪಕ್ಷ, ಅದರ ಬೆಂಬಲಕ್ಕೆ ನಿಂತ ಕೇಂದ್ರ ಸರಕಾರ ಇವುಗಳ ನಡುವಿನ ಹೋರಾಟ ತೀವ್ರಗೊಂಡುದರಿಂದಾಗಿ ಕೇಂದ್ರ ರಾಜ್ಯ ಸಂಬಂಧಗಳು ಒಂದು ಪ್ರಮುಖ ಪ್ರಶ್ನೆಯಾಗಿ ಜನತೆಯ ಸಮ್ಮುಖ ಸ್ಪಷ್ಟವಾಗಿ ನಿಂತಿದೆ.

ಈ ಪ್ರಮುಖ ಪ್ರಶ್ನೆಯಯನ್ನು ಪಶ್ಚಿಮಬಂಗಾಲ ಮತ್ತು ಕೇರಳದ ಕಾರ್ಮಿಕರ ಸುಮಾರಾಗಿ ತಮ್ಮ ಪ್ರಶ್ನೆಯೇ ಎಂದು ಬಗೆದಿದ್ದರೆ ಉಳಿದೆಡೆ ನಮ್ಮ ಸಂಘಗಳು ಹಾಗೂ ಕಾರ್ಮಿಕರು ಜನತೆಯಲ್ಲಿ ರಾಜ್ಯಕ್ಕೆ ಸ್ವಾಯತ್ತತೆ ಪಡೆಯಲು ಸಂವಿಧಾನದಲ್ಲಿ ಒಂದು ತೀವ್ರ ಬದಲಾವಣೆ ತರಬೇಕಾದುದರ ಅಗತ್ಯದ ಬಗ್ಗೆ ಪ್ರಜ್ಞೆಯನ್ನು ಇನ್ನೂ ಮೂಡಿಸಬೇಕಾಗಿದೆಯಷ್ಟೆ.

ಏಳು ವರ್ಷ ಕಾಲ ತಮ್ಮ ಹಕ್ಕುಗಳ ರಕ್ಷಣೆ ಮತ್ತು ಬೆಂಬಲಕ್ಕೆ ನಿಂತ ಕಾಂ. ಜ್ಯೋತಿಬಸುರವರ ನೇತೃತ್ವದ ಎಡರಂಗ ಸರಕಾರದ ಪ್ರಯೋಜನವನ್ನು ಪಶ್ಚಿಮ ಬಂಗಾಲದ ಕಾರ್ಮಿಕರು ಪಡೆದಿದ್ದಾರೆ. ಅಲ್ಲಿ ಮುಷ್ಕರದ ಹಕ್ಕಿಗೆ ಸಂಪೂರ್ಣ ರಕ್ಷಣೆ ದೊರಕಿದೆ. ಕೈಗಾರಿಕಾ ವಿವಾದಗಳಲ್ಲಿ ಪೋಲೀಸ್ ಮಧ್ಯಪ್ರವೇಶಿಸುವುದಿಲ್ಲ ಎಂಬ ಬಗ್ಗೆ ಭರವಸೆಯಿದೆ. ಕಾಂಗ್ರೆಸ್ (ಐ) ಆಳ್ವಿಕೆಯ ಯಾವ ರಾಜ್ಯಗಳಲ್ಲೂ ಎಂದೂ ಕಾಣಸಿಗದ ಸಂಪೂರ್ಣ ಸ್ವಾತಂತ್ರ್ಯದ ಸನ್ನಿವೇಶದಲ್ಲಿ ಎರಡು ಲಕ್ಷ ಕಾರ್ಮಿಕರು ಭಾಗವಹಿಸಿದ್ದ ಸೆಣಬು ಮುಷ್ಕರ ನಡೆಯಿತು. ಕಾರ್ಮಿಕ ಮಂತ್ರಿಯ ಮಧ್ಯ ಪ್ರವೇಶದಿಂದಾಗಿ ಹಲವು ವೇತನ ಮತ್ತು ಇತರ ಒಪ್ಪಂದಗಳು ಕೈಗೊಂಡಿವೆ.

ಆದರೂ ಈ ಅಪೂರ್ವ ಪ್ರಯೋಜನಕಾರೀ ಸನ್ನಿವೇಶವನ್ನು ಸಾಮೂಹಿಕ ಸದಸ್ಯತ್ವ ಪಡೆದು ಮುನ್ನಡೆ ಸಾಧಿಸುವಲ್ಲಿ, ಕಾಂಗ್ರೆಸ್ [ಐ]ನ್ನು ಕಾರ್ಮಿಕ ವರ್ಗದಿಂದ ಪೂರ್ಣವಾಗಿ ದೂರಮಾಡುವಲ್ಲಿ, ನಮ್ಮ ಸಂಘಗಳನ್ನು ಇತರರಿಗಿಂತ ಬಲಶಾಲಿಗೊಳಿಸುವಲ್ಲಿ ಪೂರ್ಣವಾಗಿ ಉಪಯೋಗಿಸಿಕೊಂಡಿದ್ದೇವೆ ಎಂದು ಹೇಳಲು ಸಾಧ್ಯವಿಲ್ಲ. ಸದ್ಯದ ಸಾಧನೆಯಿಂದಲೇ ನಾವು ತೃಪ್ತರಾಗಲು ಸಾಧ್ಯವಿಲ್ಲ. ಇದರೊಟ್ಟಿಗೆ ಸಮಯವನ್ನೊಂದಿಗೆ ನಾವು ಸ್ಪರ್ಧಿಸಬೇಕಾಗಿದೆ. ಜನತೆಗೆ ವಿರೋಧಿಯಾದ ಶಕ್ತಿಗಳು ನಮ್ಮ ಪ್ರತಿಯೊಂದು ದೌರ್ಬಲ್ಯವನ್ನು ಉಪಯೋಗಿಸಿ ನಮ್ಮನ್ನೇ ಸೋಲಿಸಲು ತಯಾರಾಗುತ್ತಿವೆ.

ಸವಾಲುಗಳು

ಕಳೆದು ಹೋದ ವರ್ಷ ಹಲವು ಮಹತ್ವಪೂರ್ಣ ಪ್ರಶ್ನೆಗಳನ್ನು ಕಾರ್ಮಿಕ ಆಂದೋಲನದ ಸಮ್ಮುಖ ತಂದಿಟ್ಟಿದೆ. ಕಾರ್ಮಿಕವರ್ಗ ಮತ್ತು ಕಿಸಾನ್ ಆಂದೋಲನದ ನಡುವಿನ ಸಂಪರ್ಕದ ಸ್ಥಾಪನೆ ಅವುಗಳಲ್ಲೊಂದು.

ಕಳೆದ ಕೆಲವು ತಿಂಗಳುಗಳಲ್ಲಿ ದೇಶದ ಸುತ್ತ ಮುತ್ತ ಆತಂಕಕಾರಿ ಬೆಳವಣಿಗೆಗಳು ಕಂಡು ಬರುತ್ತಿವೆ. ಪ್ರತಿಕ್ರಿಯಾವಾದಿ ಸರ್ವಾಧಿಕಾರಿಗಳಿಂದ ದೇಶ ಸುತ್ತುವರಿಯಲ್ಪಡುತ್ತಿದೆ. ಪಾಕಿಸ್ತಾನ ಮತ್ತು ಬಂಗ್ಲಾ ದೇಶಗಳಲ್ಲಿ ಅಲ್ಲಿಯ ಜನರಿಗೇ ವಿರುದ್ಧವಾದ ಮಿಲಿಟರಿ ಸರ್ವಾಧಿಕಾರಗಳಿವೆ. ಅವು ಹೆಚ್ಚೆಚ್ಚು ಅಮೇರಿಕಾದ ನೆರವಿಗೆ ಬದ್ಧವಾಗುತ್ತಿವೆ. ಈ ಅಮೇರಿಕಾ ಭಾರತದಲ್ಲಿ ಗಂಭೀರ ಸ್ಥಿತಿ ಮತ್ತು ಒತ್ತಡ ಉಂಟುಮಾಡಲು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ, ರಾಶಿರಾಶಿಯಾಗಿ ಸುರಿಯುತ್ತಿದೆ ಬಹಿರಂಗ ವೈಷಮ್ಯಕ್ಕೆ ಬುನಾದಿಹಾಕಲಿಕ್ಕಾಗಿಯೇ ಈ ಶಸ್ತ್ರಾಸ್ತ್ರಗಳು ತಮಿಳು. ಅಲ್ಪ ಸಂಖ್ಯಾತರ ಬೇಟೆಯಾಡುತ್ತಿರುವ ಶ್ರೀಲಂಕಾದ ಆಳುವ ವರ್ಗ ಕೂಡ ಇದೇ ದಾರಿ ಹಿಡಿದು, ಅಮೆರಿಕನ್ ಸಾಮ್ರಾಜ್ಯಶಾಹಿಗಳೊಂದಿಗೆ ತಮ್ಮ ರಾಜಿಯನ್ನು ಮರೆಮಾಚಲು ಭಾರತ ವಿರೋಧಿ

[ಆರನೇ ಪುಟ ನೋಡಿ]

ದ. ಕ. ಜಿಲ್ಲೆಯ ಟ್ರೇಡ್ ಯೂನಿಯನ್ ಹೋರಾಟ

[3ನೇ ಪುಟದಿಂದ]

ಕಾರ್ಖಾನೆ ಮುಚ್ಚಿದರು. ಪಂಚಾಯಿತಿಯಲ್ಲಿ ಮಧ್ಯಸ್ಥಿಕೆಯಿಂದ ಒಪ್ಪಂದ ಸೇರಿ ರೂ. 4.50 ಹೆಚ್ಚಳವಾಯಿತು.

ಮಂಗಳೂರು ಹಂಚಿನ ಮಜೂರರು 1980 ಅಕ್ಟೋಬರಿನಲ್ಲಿ ನಿಧಾನ ಕೆಲಸ ಇತ್ಯಾದಿ ಚಳವಳಿಯಿಂದ 3.50 ಹೆಚ್ಚಳವಾಯಿತು. ಬೋನಸ್ಸು ಶೇಕಡ ಅನ್ನೆರಡೂವರೆ ಸಿಕ್ಕಿತು.

ಮಂಗಳೂರಿನಲ್ಲಿ 1983 ಡಿಸೆಂಬರ್ 12 ರಿಂದ ಮಜೂರಿ ಹೆಚ್ಚಳ, ಮುಖ್ಯವಾಗಿ ತುಟ್ಟಿಭತ್ಯೆಗಾಗಿ 53 ದಿನಗಳ ದೀರ್ಘ ಮುಷ್ಕರ ನಡೆದು ರೂ 3-36 ಈ ಒಪ್ಪಂದದಲ್ಲಿ ಹೆಚ್ಚಳವಾಯಿತು. ಕುಂದಾಪುರದಲ್ಲಿ 1984 ಜನವರಿ 3 ರಿಂದ 48 ದಿನಗಳ ಮುಷ್ಕರ ನಡೆದು ಒಪ್ಪಂದವಾಗಿ ರೂ. 3.20 ದೊರೆಯಿತು. ಕುಂದಾಪುರ ತಾಲೂಕಿನ 26 ವರ್ಷದ ಹೋರಾಟ, ಚಳವಳಿಯ ಫಲವಾಗಿ ಹೊನ್ನಾವರ ಉಡುಪಿ ಪ್ರದೇಶಕ್ಕೆ ಹಂಚಿನ ಮಜೂರರ ಸಂಘಟನೆ ವಿಸ್ತರಣೆ ಆದದ್ದಲ್ಲದೆ, ರೈತ, ಬೀಡಿ, ಮೋಟಾರು ರಿಕ್ಷಾ, ಯುವಜನ, ವಿದ್ಯಾರ್ಥಿ ಇತ್ಯಾದಿ ಸಂಘಟನೆಗೆ ಮುಖಂಡತ್ವ ಸಾಧ್ಯವಾಯಿತು.

ಬೀಡಿ ಮಜೂರರ ಸಂಘಟನೆ 1952 ರವರೆಗೆ ಫ್ಯಾಕ್ಟರಿ ಕ್ರಮದಲ್ಲಿದ್ದು, ನಂತರ ಮನೆ ಮನೆಗೆ ವಿಸ್ತರಣೆ ಮಾಡಲ್ಪಟ್ಟು ಈಗ ಫ್ಯಾಕ್ಟರಿ ಕ್ರಮ ಸಂಪೂರ್ಣ ನಿಂತು ಹೋಗಿದೆ. ಶೇಕಡ 85 ಸ್ತ್ರೀಯರಾಗಿದ್ದಾರೆ. 1968 ರಲ್ಲಿ ಕೇರಳದಿಂದ ಗಣೇಶ, ಭಾರತ, ಪಿ. ವಿ ಎಸ್ ಇತ್ಯಾದಿ ಕಂಪೆನಿಗಳು ರಾತ್ರಿ ರಾತ್ರಿ ಗಂಟು ಮೂಟೆಕಟ್ಟಿ ಮಂಗಳೂರಿಗೆ ಓಡಿ ಬಂದರು. ಕೇರಳದಲ್ಲಿ 16000 ಮಂದಿ ನಿರುದ್ಯೋಗಿಗಳಾದರು. ಅಲ್ಲಿಯ ಫ್ಯಾಕ್ಟರಿಯ ಕ್ರಮವನ್ನು ಬದಲಿಸಲಾಗದೆ ಓಡಿ ಬಂದರು. ಕಾಂ. ಎ. ಕೆ. ಜಿ. ಯವರು ಮಂಗಳೂರಿಗೆ ಬಂದು ಕೇರಳ ಮಜೂರರಿಗೆ ಮಾಡಿದ ಅನ್ಯಾಯವನ್ನು ಮನದಟ್ಟು ಮಾಡಿ ಸಂಘಟನೆಗೆ ದೊಡ್ಡ ಹೋರಾಟಕ್ಕೆ ಮುಖಂಡತ್ವ ನೀಡಿದರು. ಪಿಕೆಟಿಂಗ್‌ನಲ್ಲಿ 700 ಮಂದಿ ಜೈಲು ಸೇರಿದರು. 400 ಮಂದಿ ಸ್ತ್ರೀಯರು ಮಂಗಳೂರಿನವರೇ ಆಗಿದ್ದರು. 10 ದಿನದಿಂದ 20 ದಿನಗಳವರೆಗೆ ಜೈಲುವಾಸ ಅನುಭವಿಸಿದ್ದಾರೆ. ಇದರಿಂದ ಬೀಡಿ ಸಂಘಟನೆಗೆ ಶಕ್ತಿ ಬಂತು. 1972 ಆಗಸ್ಟ್ 30 ರಂದು ತುಮಕೂರಿನಲ್ಲಿ ಬೀಡಿ ರಾಜ್ಯ ಸಮ್ಮೇಳನ ನಡೆಯಿತು.

1974 ಸಪ್ಟೆಂಬರ್ 24 ಯಾ. 25 ರಂದು ದಕ್ಷಿಣ ಭಾರತ ಬೀಡಿ ಮಜೂರರ ಸಮ್ಮೇಳನ ಮಂಗಳೂರಿನಲ್ಲಿ ನಡೆಯಿತು. ಈ ಸಮ್ಮೇಳನಕ್ಕೆ 10 000 ಜನರ ಮೆರವಣಿಗೆ ನಡೆಯಿತು. ಸಮ್ಮೇಳನದ ನಂತರ ಬೀಡಿ ಸಂಘಟನೆಗೆ ಶಕ್ತಿ ಬಂತು ನಂತರ 2, 5 ದಿನಗಳ ಉಡುಪಿ, ಮಂಗಳೂರು, ಬಂಟವಾಳದಲ್ಲಿ ಚಳವಳಿ, ಮುಷ್ಕರವಾಯಿತು. ಇದರ ಫಲವಾಗಿ 1974 ರಂದು ಸುಪ್ರೀಂ ಕೋರ್ಟು ತೀರ್ಪು ಬಂತು. ಮಾಲಕರ ಕಾರ್ಮಿಕರ ಸಂಬಂಧದ ಕ್ರಮಗಳು, ಕಾನೂನು ಜಾರಿಯಾಗುವ ರೀತಿಯಲ್ಲಿ ತೀರ್ಪಿತ್ತು.

ಮಾಲಕರು ಜಾರಿ ಮಾಡಲಿಲ್ಲ. 1974 ಜೂನ್ 21 ರಂದು ದೊಡ್ಡ ಬೀಡಿ ಮಾಲಕರುಗಳು ಮಂಗಳೂರಿನಲ್ಲಿರುವುದರಿಂದ ಅವರನ್ನು ಘೇರಾವ್ ಮಾಡಲು ಸಂಘ ತೀರ್ಮಾನಿಸಿತು. ಆ ದಿನ ಸಾವಿರ ಸಾವಿರ ಮಜೂರರು ಹೊರಡುವಾಗ ಬೀಡಿ ಮಾಲಕರು ಕಛೇರಿಗೆ ಬೀಗ ಹಾಕಿ ಅಡಗಿದರು. ಈ ಹೋರಾಟದ ಪರಿಣಾಮವಾಗಿ ಆಗಸ್ಟ್ ತಿಂಗಳಿನಲ್ಲಿ ಸರಕಾರ ಮಜೂರ, ಮಾಲಕರೊಳಗೆ ಒಪ್ಪಂದವಾಗಿ ಬೋನಸ್ಸು 8.33 ಶೇಕಡ, ಹೆರಿಗೆ ಭತ್ಯೆ, ಹಕ್ಕಿನ ರಜೆ, ಹಬ್ಬದ ರಜೆ ಸಿಗುವಂತಾಯಿತು. ಪ್ರೊವಿಡೆಂಡ್ ಫಂಡು ಜಾರಿಯಾಯಿತು ರಶೀದಿ ಪಡೆಯಲೂ ಬೇರೆಯೇ ಹೋರಾಟ ಮುಷ್ಕರಗಳನ್ನು ನಡೆಸಬೇಕಾಯಿತು. ಮಜೂರರ ಸಂಘಟಿತ ಹೋರಾಟದ ಪರಿಣಾಮವಾಗಿ ಈಗ ಮಜೂರರಿಗೆ 1000 ಬೀಡಿಗೆ 9-70 ದೊರೆಯುತ್ತಿದೆ.

ನೇಕಾರರ ಸಂಘ 3 ವರ್ಷದ ಒಪ್ಪಂದ ಮುಗಿಯುವಾಗ ಒಂದು ದಿನದ ಮುಷ್ಕರ ಬೇರೆ ಬೇರೆ, ರೀತಿಯ ಕಾರ್ಯಕ್ರಮಗಳ ಮೂಲಕ 20 ರಿಂದ 31 ಶೇಕಡ ಹೆಚ್ಚಳ ಮಜೂರಿ ಪಡೆಯಲು ಸಾಧ್ಯವಾಗಿದೆ. ಬಂದರು ಮಜೂರರು ನಿಧಾನ ಕೆಲಸ ಚಳವಳಿಯಿಂದ 1983 ಕ್ಕೆ ಮಜೂರಿ ಹೆಚ್ಚಳ ಪಡೆದರು. ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನಿನ ಮೂಲಕ 1970 ರವರೆಗೆ ಸಂಬಳ ಕಡಿಮೆಯಿತ್ತು ದೊಡ್ಡ ಮುಷ್ಕರ, ಚಳುವಳಿ, ಹೋರಾಟದಿಂದಾಗಿ ಮೂರು ವರ್ಷಕ್ಕೊಮ್ಮೆ ಸಂಬಳ, ಇಂಕ್ರಿಮೆಂಟ್ ಹೆಚ್ಚು ಮಾಡಿ 1970 ಕ್ಕಿಂತ ಒಂದೂವರೆ ಪಾಲು ಬೇರೆ ಬೇರೆ ಕೆಟಗರಿ ಮೂಲಕ ಹೆಚ್ಚಿಸಿಕೊಳ್ಳಲು ಸಾಧ್ಯವಾಗಿದೆ.

ಮೋಟಾರ್ ಟ್ರಾನ್ಸ್‌ಪೋರ್ಟ್ ಎಂಜಿನಿಯರಿಂಗ್ ವರ್ಕರ್ಸ್ ಯೂನಿಯನಿನ ಮೂಲಕ 1976, 78, 81 ರಲ್ಲಿ ದೊಡ್ಡ ಮುಷ್ಕರಗಳನ್ನು ನಡೆಸಿದ್ದರು. ಶ್ರೀಮಾನ್ ಸಂಜೀವ ಕುದ್ರೋಳಿಯ ಮೂಲಕ ಕಾರ್ಮಿಕರನ್ನು ಹೊಡೆಯುವ ಮಟ್ಟಕ್ಕೆ ಇಳಿದಿದ್ದರು. ಕನಿಷ್ಠ ಸಂಬಳ ಮಾತ್ರ ಜಾರಿಯಲ್ಲಿದ್ದು ಈ ಮೂರು ಮುಷ್ಕರದ ಕೇಳಿಕೆಗಳು ಬೆಂಗಳೂರು ಇಂಡಸ್ಟ್ರಿಯಲ್ ಟ್ರಿಬುನಲ್ ಮತ್ತು ಹೈ ಕೋರ್ಟುಗಳಲ್ಲಿ ಕೊಳೆಯುತ್ತಿದೆ.

ಇದರ ಒಂದು ಭಾಗವಾಗಿರುವ ಕೆನರಾ ವರ್ಕ್ ಶಾಪಿನಲ್ಲಿ ಮಜೂರರು ಶೇಕಡ 50 ಮಜೂರಿ ಹೆಚ್ಚಳ ಮತ್ತು 1982 ಕ್ಕೆ 30 ಶೇಕಡ 1983 ಕ್ಕೆ 20 ಶೇಕಡ ಬೋನಸ್ಸು ಪಡೆಯಲು ಸಾಧ್ಯವಾಗಿದೆ.

ರಿಕ್ಷಾ ಮಾಲಕ ಮಜೂರರ ಸಂಘಟನೆ ಕಟ್ಟಿ ಪೋಲಿಸ್ ದಬ್ಬಾಳಿಕೆ ವಿರುದ್ಧವಾಗಿ ಮೀಟರ್ ದರಗಳ ಕ್ರಮದಲ್ಲಿ ಬದಲಾವಣೆಗಾಗಿ ಹಲವಾರು ಹೋರಾಟ ಚಳವಳಿಯಲ್ಲಿ ಸಕ್ರೀಯ ಪಾಲ್ಗೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಮಜೂರರು ರಾಜಕೀಯ ಹೋರಾಟದಲ್ಲಿಯೂ ಹಿಂದೆ ಬೀಳಲಿಲ್ಲ. ಆಹಾರ ಧಾನ್ಯಗಳ, ಬಸ್ಸು ದರಗಳ ಹೆಚ್ಚಳ ವಿರುದ್ಧ, ಜನ ಸಾಮಾನ್ಯರ ಮೇಲಿನ ಪ್ರತಿಯೊಂದು ಸಮಸ್ಯೆಗಳಿಗೆ ಹೋರಾಟದ ನಾಯಕತ್ವ ಮಾಡುತ್ತಾ ಬಂದಿವೆ. ●

ಯಾದಗಿರಿ

ರೈತರಿಂದ ಉಪವಾಸ ಸತ್ಯಾಗ್ರಹ

ಕರ್ನಾಟಕ ಪ್ರಾಂತ ರೈತ ಸಂಘ ಯಾದಗಿರಿ ತಾಲೂಕು ಘಟಕವು ದಿನಾಂಕ : 21-5-1984 ರಿಂದ ಸಹಾಯಕ ಕಮೀಷನರ ಅವರ ಕಛೇರಿಯ ಮುಂದೆ ಸರದಿ ಉಪವಾಸ ಸತ್ಯಾಗ್ರಹಕ್ಕೆ ಗೊಂಡಿದೆ.

ರೈತರು ಎದುರಿಸುತ್ತಿರುವ ಸುಮಾರು 10 ಬೇಡಿಕೆಗಳನ್ನು ಒತ್ತಾಯಿಸಿ ಉಪವಾಸ ಸತ್ಯಾಗ್ರಹವನ್ನು ಚಟುಗ್ರಾಮ, ಹೊಡೇಬಲ್ಲಿ, ಎಲ್ಹೇರಿ, ಗಣಪುರ, ಗ್ರಾಮದ ಸುಮಾರು 1000 ರೈತರು ಮೆರವಣಿಗೆಯೊಂದಿಗೆ ಯಾದಗಿರ ಪಟ್ಟಣದಲ್ಲಿ ಸುತ್ತಾಡಿ ಕೊನೆಗೆ ಕಮೀಷನರ ಕಛೇರಿ ಮುಂದೆ ಸತ್ಯಾಗ್ರಹ ಪ್ರಾರಂಭ ಮಾಡಿದರು. ಇದರ ಸಂಬಂಧದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳಿಗೆ, ರೈತ ಸಂಘದ ಅಧ್ಯಕ್ಷರು ಆದ ಅರುಣ ಕುಮಾರ ಮತ್ತು ಕಲ್ಲಪ್ಪ ಕಿರಣಗಿ, ಗುಲಾಮ ಇಬ್ರಾಹಿಮ ಮತ್ತು ಸಿ. ಎ. ಪಾಟೀಲರ ನಿಯೋಗವು ಮನವಿ ಸಲ್ಲಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಕೂಡಲೆ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದರು.

ರೈತ ಸಂಘದ ಕಾರ್ಯದರ್ಶಿ ಕಾ. ಕಲ್ಲಪ್ಪ ಕಿರಣಗಿಯವರ ನೇತೃತ್ವದಲ್ಲಿ ಸತ್ಯಾಗ್ರಹ ಮುಂದುವರಿಯುವುದೆಂದು ಕಾರ್ಯಕಾರಿ ಸಮಿತಿಯಲ್ಲಿ ನಿರ್ಣಯ ಕೈ ಕೊಳ್ಳಲಾಯಿತು.

"ವರದಕ್ಷಿಣೆ" ಸಾವು : ಪ್ರತಿಭಟನೆ

ಸಿಂಧನೂರಿನ ಜಾಲಿಹಾಳ ಕ್ಯಾಂಪಿನಲ್ಲಿ ಏ. 6 ರಂದು ವರದಕ್ಷಿಣೆ ಪಿಡುಗಿಗೆ ಚಂದ್ರವತಿ ಎಂಬ ಮುಗ್ಧ ಯುವತಿ ಬಲಿಯಾಗಿದ್ದಾಳೆ. [ಇದರ ವರದಿ ಈ ಹಿಂದೆ 'ಐಕ್ಯರಂಗ' ದಲ್ಲಿ ಪ್ರಕಟವಾಗಿದೆ.] ಇದರ ವಿರುದ್ಧ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಯಚೂರ ಘಟಕ ದಿನಾಂಕ 21-4-84 ರಂದು ಜಾಲಿಹಾಳಕ್ಯಾಂಪಿನಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಿತ್ತು. ಸಭೆಯಲ್ಲಿ ಮಹಿಳಾ ಸಂಘಟನೆಯ ಕಾರ್ಯದರ್ಶಿ ಶ್ರೀಮತಿ ಶಾಮಲಾ ಪೂಜಾರ, ಕರ್ನಾಟಕ ಪ್ರಾಂತ ರೈತ ಸಂಘದ ಬಿ. ಲಿಂಗಪ್ಪ, ಡಿ.ವೈ. ಎಫ್. ಐ.ನ ನಾರಾಯಣ ಕಿಲ್ಲೆದ ಭಾಗವಹಿಸಿದ್ದರು.

ಅದೇ ದಿನ ಸಾಯಂಕಾಲ ಸಿಂಧನೂರಿನ ಮುನಿಸಿಫಲ್ ಮೈದಾನದಲ್ಲಿ ನಡೆದ ಭಾರಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ನ್ಯಾಯವಾದಿ ಬಸವರಾಜಪ್ಪ ಮಾಲಿಪಾಟೀಲ್ ಅವರು ವರದಕ್ಷಿಣೆ ಪಿಡುಗಿನ ವಿರುದ್ಧ ವ್ಯಾಪಕ ಚಳುವಳಿ ಅಗತ್ಯ ಎಂದರು. ಅಧ್ಯಕ್ಷತೆ ವಹಿಸಿದ್ದ ಶಾಮಲಾ ಪೂಜಾರ ದೇಶದಲ್ಲಿ ವರದಕ್ಷಿಣೆ ಪಿಡುಗಿಗೆ ಮುಗ್ಧ ಹೆಣ್ಣುಗಳ ಬಲಿ ಹೆಚ್ಚಾಗುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿ, ಇದರ ವಿರುದ್ಧ ಹೋರಾಟ ನಡೆಸುವುದು ಅಗತ್ಯ ಎಂದರು. ಚಂದ್ರವತಿ ಸಾವಿಗೆ ಕಾರಣರಾದವರಿಗೆ ಶಿಕ್ಷೆ ಕೊಡದಿದ್ದುದನ್ನು ಖಂಡಿಸಿದ ಅವರು ಮತ್ತೊಬ್ಬ ಚಂದ್ರವತಿಯನ್ನು ಕಳೆದುಕೊಳ್ಳದಂತೆ ಜನಜಾಗೃತಿ ಮೂಡಿಸಬೇಕಾಗಿದೆಂದರು. ಕೊನೆಯಲ್ಲಿ ಮಹಿಳಾ ಸಂಘಟನೆಯವರಿಂದ ಕ್ರಾಂತಿ ಗೀತೆಗಳ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ನಿರುದ್ಯೋಗದ ವಿರುದ್ಧ ಹೋರಾಟ ನಡೆಸಬೇಕು

(5ನೇ ಪುಟದಿಂದ)

ಭಾವನೆಗಳನ್ನು ಕೆರಳಿಸುತ್ತಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಗಳು ಟ್ರಿಂಕೋಮಾಲಿ ಮತ್ತು ಚಿತ್ತಗಾಂಗ್‌ನಲ್ಲಿ ಮಿಲಿಟರಿ ನೆಲೆಗಾಗಿ ಪ್ರಯತ್ನಿಸುತ್ತಿದ್ದಾರೆ.

ದೇಶದ ಸುತ್ತ ಈ ಸಾಮ್ರಾಜ್ಯಶಾಹೀ ಪಿತೂರಿಗಳೊಂದಿಗೇ ದೇಶದಲ್ಲಿನ ಪ್ರತ್ಯೇಕತಾವಾದಿ ಶಕ್ತಿಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಅಸ್ಸಾಂನಲ್ಲಿ ಸಾಮ್ರಾಜ್ಯಶಾಹೀ ಏಜೆಂಸಿಗಳ ಪಾತ್ರ ಪೂರ್ಣವಾಗಿ ಜಾಹೀರಾಗಿದೆ. ಪಂಜಾಬಿನ ಪರಿಸ್ಥಿತಿಯ ದುರ್ಲಾಭ ಪಡೆದು ಪ್ರತ್ಯೇಕತಾವಾದಿ ಮತ್ತು ಕೋಮುವಾದಿ ಶಕ್ತಿಗಳಿಗೂ ಅವರು ಕುಮ್ಮಕ್ಕು ನೀಡುತ್ತಿದ್ದಾರೆ. ಆಗಾಗ ತನ್ನ ರಾಷ್ಟ್ರೀಯವಾದೀ ದೃಷ್ಟಿಕೋನದ ಘೋಷಣೆ ಮಾಡುವ ಅಕಾಲಿ ನಾಯಕತ್ವ ಕೋಮುವಾದಿ ಶಕ್ತಿಗಳ ಅಸಹಾಯಕ ಕೈಗೊಂಬೆಯಾಗುತ್ತಿದೆ. ತಕ್ಷಣದ ಪ್ರಯೋಜನಕ್ಕಾಗಿ ಕೋಮು ಭಾವನೆಗಳನ್ನು ಬಡಿದೆಬ್ಬಿಸುವ ಯಾರೇ ಆದರೂ ಅಂತಿಮವಾಗಿ ದೇಶದ ಶತ್ರುಗಳ ಕೈಗೊಂಬೆಯಾಗಬೇಕಾಗುತ್ತದೆ ಎಂಬುದನ್ನು ಇದು ತೋರಿಸುತ್ತದೆ.

ಈಗ ಸಾಮ್ರಾಜ್ಯಶಾಹಿಯಿಂದ ಪ್ರೋತ್ಸಾಹ ಪಡೆಯುತ್ತಿರುವ ವಿಚ್ಛಿದ್ರಕಾರೀ ಶಕ್ತಿಗಳು ಬೂರ್ಜ್ವಾ ಭೂಮಾಲಿಕ ಇಂದಿರಾ ಸರಕಾರ ಒದಗಿಸಿದ ನೆಲದಲ್ಲಿ ಅರಳಲು ಅವಕಾಶವಾಗಿದೆ. ಬೂರ್ಜ್ವಾ ಭೂಮಾಲಕ ವರ್ಗಗಳ ಹಿತಾಸಕ್ತಿಗಳೂ ರಕ್ಷಣೆಗೆ ಬದ್ಧವಾದ ಒಂದು ಸರಕಾರ ದೇಶದ ಐಕ್ಯತೆಯನ್ನಾಗಲೀ, ಅದರ ಸ್ವಾತಂತ್ರ್ಯವನ್ನಾಗಲೀ ರಕ್ಷಿಸಲಾರದು ಎಂಬುದನ್ನು ಇದು ಮತ್ತೊಮ್ಮೆ ತೋರಿಸಿಕೊಟ್ಟಿದೆ.

ಕಾಂಗ್ರೆಸ್ [ಐ] ಸರಕಾರ ತನ್ನ ಆರ್ಥಿಕ ಮತ್ತು ರಾಜಕೀಯ ಧೋರಣೆಗಳಿಂದಾಗಿ ಶೀಘ್ರಗತಿಯಲ್ಲಿ ದೇಶದ ವಿಘಟನೆಗೆ ದಾರಿ ಮಾಡಿಕೊಡುತ್ತಿದೆ. ತನ್ನನ್ನು ರಕ್ಷಿಸಿಕೊಳ್ಳಲು ಅದು ಮತ್ತೊಮ್ಮೆ ಜನತೆಯ ಮೇಲೆ ಅಧ್ಯಕ್ಷ ಮಾದರಿ ಸರಕಾರವನ್ನು ಹೇರಲು ಪ್ರಯತ್ನಿಸುತ್ತಿದೆ. ಇತ್ತೀಚಿನ ರಾಜ್ಯ ಸಭಾ ಚುನಾವಣೆಗಳಿಂದಾಗಿ ಸಂಸತ್ತಿನಲ್ಲಿ ಅದರ ಸದಸ್ಯ ಬಲ ಹೆಚ್ಚಿದೆ. ಆದ್ದರಿಂದ ಒಂದು ಸಂವಿಧಾನಿಕ ತಿದ್ದುಪಡಿ ಮೂಲಕ ಅಧ್ಯಕ್ಷ ಮಾದರಿ ಸರಕಾರವೊಂದನ್ನು ಆರಂಭಿಸಲು ಅದು ಪ್ರಯತ್ನಿಸಬಹುದು.

ನಮ್ಮ ಸಮ್ಮುಖ ತೀವ್ರ ಸ್ವರೂಪದಲ್ಲಿ ಕಂಡು ಬರುತ್ತಿರುವ ಸವಾಲುಗಳಿವು. ನಮ್ಮ ಕಾರ್ಮಿಕ ಆಂದೋಲನ ಈ ಸವಾಲುಗಳನ್ನು ಎದುರಿಸಲು ಜಾಗರೂಕವಾಗಿರಬೇಕು.

ರೈತ ಸಂಘದ ಸಭೆ

ಕ. ಪ್ರಾ. ರೈತ ಸಂಘದ ಆಶ್ರಯದಲ್ಲಿ ತಾ. 25.4.84 ರಂದು ಕಾ. ಮುದ್ದರಂಗಪ್ಪನವರ ಅಧ್ಯಕ್ಷತೆಯಲ್ಲಿ ತುಮಕೂರು ಕಸಬಾ ಊರುಕೆರೆ ಗ್ರಾಮದಲ್ಲಿ ಬಹಿರಂಗ ಸಭೆ ನಡೆದು ರಾಜ್ಯ ಸರ್ಕಾರದಿಂದ ವಿಧವೆಯರಿಗೆ ಮಂಜೂರಾಗುವ ಮಾಶಾಸನದ ಮಾಹಿತಿಗಳನ್ನ ತಿಳಿಯಪಡಿಸಲಾಯ್ತು. ಸಭೆಯಲ್ಲಿ ನೂರಾರು ವಿಧವೆಯರು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತುಮಕೂರು ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾಂ. ಟಿ. ಕೆ. ಗೋವಿಂದ ರಾಜುರವರು, ಸ್ಥಳೀಯ ಶಾಖೆಯ ವಿ. ರಂಗಪ್ಪದಾಸ್, ಎನ್. ಗೋಪಾಲಯ್ಯ ಮತ್ತು ಶ್ರೀ ಆರ್. ಶ್ರೀನಿವಾಸ್ ರವರೂ ಈ ಬಗ್ಗೆ ಸರ್ಕಾರದ ಆಜ್ಞೆಯನ್ನು ವಿವರಿಸಿದರು ಅರ್ಹತೆಯುಳ್ಳ ಅರ್ಜಿದಾರರುಗಳಿಗೆ ಸಂಘದ ಮುಖೇನ ಸಾಧ್ಯವಾದ ಎಲ್ಲಾ ಸಹಾಯ ಸಹಕಾರಗಳನ್ನಿತ್ತು ಮಾಶಾಸನ ಮಂಜೂರಾಗಲು ನೆರವಾಗುವುದಾಗಿ ಆಶ್ವಾಸನೆ ಇತ್ತರು.

ರಾಜ್ಯ ಸಿಐಟಿಯು ಪದಾಧಿಕಾರಿಗಳು

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮ್ಮೇಳನ ಕೊರಗಪ್ಪರೈ ನಗರದಲ್ಲಿ ಮೇ 14-17ರ ವರೆಗೆ ಸೇರಿದಾಗ ಮುಂದಿನ ಮೂರುವರ್ಷಗಳ ಸಲುವಾಗಿ ಕೆಳಕಂಡ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆರಿಸಲಾಯಿತು.

ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷ, ಸಿ. ನಂಜುಂಡಪ್ಪ ಪ್ರಧಾನ ಕಾರ್ಯದರ್ಶಿ, ಮೂಸಬ್ಬ, ಮಹಮ್ಮದ್ ದಸ್ತಗೀರ್ ಉಪಾಧ್ಯಕ್ಷರು ವಿ. ಜೆ. ಕೆ. ನಾಯರ್, ಎಂ. ಮಾಧವ, ಕಾರ್ಯದರ್ಶಿಗಳು ಎನ್.ಕೆ. ಉಪಾಧ್ಯಾಯ ಕೋಶಾಧಿಕಾರಿ

ರಾಜ್ಯ ಕೌನ್ಸಿಲಿಗೆ 103 ಜನರು ಆರಿಸಲ್ಪಟ್ಟು, ಕೂಡಲೇ ಕೌನ್ಸಿಲ್ ಸಭೆ ಸೇರಿ ಕೆಳಕಂಡ 28 ಜನರನ್ನು ರಾಜ್ಯ ಸಮಿತಿಗೆ ಆರಿಸಲಾಯಿತು.

ಪಿ. ರಾಮಚಂದ್ರರಾವ್, ಕೆ. ಆರ್. ಶ್ರಿಯಾನ್, ಕೆ. ಶಂಕರ್, ಯು. ಬಿ. ಲೋಕಯ್ಯ, ವಿ. ಸುಕುಮಾರ್, ಎ. ಸಿ. ಕೇಶವ, ಎಂ. ಎಫ್. ಉಗ್ರಪ್ಪ, ಎಸ್. ಸೌರೀದಾಸ್, ಟಿ. ಎಸ್. ಮಣಿ ಡಿ. ಎಂ. ಖಲಾಸಿ, ಆರ್. ವಿ. ಅಂಗಡಿ ಭೀಮಪ್ಪರೆಡ್ಡಿ, ಎಂ. ಬಿ. ಕಟ್ಟಿ, ಉಮೇಶನಾಯಕ, ಬಡೇಸಾಬ್, ಟಿ. ಎಸ್. ಅನಂತರಾಂ, ಆರ್. ಶ್ರೀನಿವಾಸ್, ಕೆ. ಎಸ್. ಸುಬ್ರಮಣ್ಯ, ನಾರಾಯಣರಾವ್ ಬಾನು, ನರಸಿಂಹನ್ ರಾಜಣ್ಣ, ಪದ್ಮಾವತಿ, ಪೂರ್ಣಿಮಾ, ಸರೋಜಾ, ವಿ. ಎಂ. ಪೂಜಾರ್.

ಒಟ್ಟು ಪ್ರಾತಿನಿಧ್ಯ

ಯೂನಿಯನ್‌ಗಳು	92
ಪ್ರತಿನಿಧಿಗಳು	405+9
ಮಹಿಳೆಯರು	48
ಪುರುಷರು	357
ವೀಕ್ಷಕರು	27
ಸೌಹಾರ್ದ ಪ್ರತಿನಿಧಿಗಳು	6
ಒಟ್ಟು ಸದಸ್ಯರ ಸಂಖ್ಯೆ	53,464

ಕೈಗಾರಿಕಾ ವಾರು ವಿವರಣೆ

	ಯೂನಿಯನ್	ಸದಸ್ಯರು	ಪ್ರತಿನಿಧಿಗಳು
ಹತ್ತಿಗಿರಣಿ	5	5097	27
ಬೀಡಿ	9	11,912	77
ತೋಟ	3	3163	23
ರಸ್ತೆ ಸಾರಿಗೆ	11	1804	17
ಇಂಜನಿಯರಿಂಗ್	15	6390	62
ಆಹಾರ ಪಾನೀಯ	8	1970	22
ಕಾಫಿಕ್ಯೂರಿಂಗ್	2	490	6
ಪೇಪರ್	2	1260	13
ಸಕ್ಕರೆ	1	301	3
ಸಿಮೆಂಟ್	1	250	3
ಗಣಿ	1	6000	25
ಹಂಚು	1	4828	50
ಪ್ಲೈವುಡ್	3	945	9
ಪ್ರೆಸ್	2	565	6
ಪುರಸಭೆ	3	980	8
ರಬ್ಬರ್	2	1517	5
ಹೋಟೆಲ್	3	1095	6
ಇತರ	14	3691	30
ನೊಂದಾವಣೆ ಇಲ್ಲದ್ದು	13	2206	13

11-6-84 ರಂದು ರೈತ ಸತ್ಯಾಗ್ರಹ

ಕರ್ನಾಟಕದ ಜನತಾ ಸರಕಾರ ರಾಜ್ಯದಲ್ಲಿ ಸಾವಿರಾರು ರೈತರ, ಕೃಷಿ ಕಾರ್ಮಿಕರ, ನಿವೇಶನಹೀನರ ಒತ್ತುವರಿ ಭೂಮಿಯನ್ನು ಸಕ್ರಮಗೊಳಿಸಿ ಅವರಿಗೆ ಪಟ್ಟಾ ನಿರಾಕರಿಸುತ್ತಿದೆ. ನಿವೇಶನರಹಿತರಿಗೆ ಭೂಮಿಕೊಡುತ್ತಿಲ್ಲ. ಹೆಚ್ಚುವರಿ ಭೂಮಿಯನ್ನು ಕೃಷಿ ಕಾರ್ಮಿಕರಿಗೆ ವಿತರಣೆ ಮಾಡುತ್ತಿಲ್ಲ. ದೊಡ್ಡ ತೋಟಮಾಲಕರ, ಭೂಮಾಲಕರ ಒತ್ತುವರಿ ಭೂಮಿಯನ್ನಷ್ಟೆ ಸರಕಾರ ಕ್ರಮಬದ್ಧಗೊಳಿಸಲು ಮುಂದಾಗಿದೆ. ಬಡವರನ್ನು ಭೂಮಿಯಿಂದ ಹೊರಹಾಕುತ್ತಿದೆ. ಅವರ ಮೇಲೆ ದಬ್ಬಾಳಿಕೆ ನಡೆಸುತ್ತಿದೆ. ಖಟ್ಲೆ ಹಾಕುತ್ತಿದೆ.

ಸರಕಾರದ ಈ ನೀತಿಯನ್ನು ಪ್ರತಿಭಟಿಸಲು 11-6-84 ರಂದು ರಾಜ್ಯಾದ್ಯಂತ ಸತ್ಯಾಗ್ರಹ ನಡೆಸಬೇಕೆಂದು ಪ್ರಾಂತ ರೈತ ಸಂಘ ನಿರ್ಣಯಿಸಿದೆ. ಈ ನಿರ್ಣಯಕ್ಕೆ ಸಂಪೂರ್ಣ ಬೆಂಬಲನೀಡಬೇಕೆಂದೂ, ಜೂನ್ 11 ರಂದು ಸಿ.ಐ.ಟಿ.ಯು.ಗೆ ಸೇರಿದ ಎಲ್ಲಾ ಕಾರ್ಮಿಕ ಸಂಘಗಳೂ ಒಂದು ದಿವಸ ಮುಷ್ಕರ ಮಾಡಿ ರೈತರ, ಕೃಷಿ ಕಾರ್ಮಿಕರ ಹೋರಾಟದಲ್ಲಿ ಸಹಭಾಗಿಗಳಾಗಿ, ರೈತ ಕಾರ್ಮಿಕರ ಐಕ್ಯತೆ ಸಾಧಿಸಬೇಕೆಂದೂ ಮಂಗಳೂರಿನಲ್ಲಿ ಮೇ 14-17ರ ವರೆಗೆ ಸೇರಿದ ಸಿ. ಐ. ಟಿ. ಯು. ರಾಜ್ಯ 4 ನೇ ಸಮ್ಮೇಳನ ಸರ್ವಾನುಮತ ನಿರ್ಣಯ ಪಾಸುಮಾಡಿ ಈ ಹೋರಾಟ ಯಶಸ್ವಿಯಾಗಲಿ, ರೈತ ಕಾರ್ಮಿಕರ ಐಕ್ಯತೆ ಚಿರಾಯುವಾಗಲೆಂದು ಹಾರೈಸಿದೆ.

[2ನೇ ಪುಟದಿಂದ]

ಆಸೆ ಚಿಗುರಲು ಕಾರಣ. ಬೂಟಾಸಿಂಗ್, ಶಾಲಿನಿ ತಾಯಿ, ಮೊಯಿಲಿ, ಯವರಿಂದ ಸಾಧಿಸಲಾರದ್ದನ್ನು ತಾನು ಸಾಧಿಸಿಯೇ ತೀರುತ್ತೇನೆಂಬ ಜಂಬ ಕೊಚ್ಚಿಕೊಳ್ಳುತ್ತಿರುವ ಗುಂಡೂರಾಯರಿಗೆ, ಜನತಾ ಸರಕಾರದ ಕಾರ್ಯದಲ್ಲಿಯ ನಿಧಾನ ನಿಲುವು ಪ್ರೋತ್ಸಾಹ ನೀಡುತ್ತಿದೆ.

ಜನತಾ ಪಕ್ಷದ, ಸರಕಾರದ ತಪ್ಪು ತಡೆಗಳಿಂದಾಗಿ, ಜನರಲ್ಲಿ ಅಸಮಾಧಾನ ಉಂಟಾಗುತ್ತಿದ್ದರೂ ಕೂಡ ಇಡೀ ದೇಶದಲ್ಲೇ ಕಳೆದ ನಾಲ್ಕು ವರ್ಷಗಳಿಂದ ಬೆಳೆದು ಬರುತ್ತಿರುವ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಸಂಯುಕ್ತ ಹೋರಾಟಗಳೂ ಹಾಗೆಯೇ ಕರ್ನಾಟಕದಲ್ಲಿ ಎರಡೂ ಕಮ್ಯುನಿಸ್ಟ್ ಪಾರ್ಟಿಗಳು ರೈತ-ಕಾರ್ಮಿಕ ಸಂಘಟನೆಗಳು, ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಬಲಗೊಳ್ಳುತ್ತಿದ್ದು ಜನತಾ ಪಕ್ಷದ, ಆದರೆ ಸರಕಾರದ ತಪ್ಪು ತಡೆಗಳ ಲಾಭ ಪಡೆದು ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಆರಿಸಿ ಬರುವುದನ್ನೂ ಅದರಿಂದಾಗಿ ಹೆಗಡೆ ಸರಕಾರ ಬಿದ್ದು ಗುಂಡೂರಾವ ಮತ್ತೆ ಮುಖ್ಯಮಂತ್ರಿ ಸ್ಥಾನ ಪಡೆಯುವುದನ್ನೂ ತನ್ನೆಲ್ಲ ಶಕ್ತಿಯನ್ನು ಉಪಯೋಗಿಸಿ ತಡೆಹಿಡಿಯುತ್ತದೆ. 1983ರಲ್ಲಿ ಸೋತ ಕಾಂಗ್ರೆಸ್ ಮತ್ತೊಮ್ಮೆ ಅಧಿಕಾರಕ್ಕೆ ಬಾರದಂತೆ ಮಾಡುತ್ತದೆ. ರಾಜ್ಯದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬೆಳೆಯುತ್ತವೆ. ಭದ್ರಗೊಳ್ಳುತ್ತವೆ. ವಿಶಾಲಗೊಳ್ಳುತ್ತವೆಂಬ ವಿಶ್ವಾಸವನ್ನು ಪಡೆದಿದ್ದೇವೆ. ಈ ಶಕ್ತಿಗಳು ಗುಂಡೂರಾಯರ ಕನಸು ನನಸಾಗದಂತೆ ಮಾಡುತ್ತವೆಂಬ ವಿಶ್ವಾಸ ಪಡೆದಿದ್ದೇವೆ. ●

ಒಕ್ಕಲೆಬ್ಬಿಸುವುದರ ವಿರುದ್ಧ ಮುಖ್ಯಮಂತ್ರಿಗಳಿಗೆ ಮನವಿ

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿಗೆ ಸೇರಿದ ಕುಟ್ಟ ಗ್ರಾಮದ ಸರ್ವೆ ನಂಬರ್ 72/1ರಲ್ಲಿ ಸದರಿ ಗ್ರಾಮದ ಗ್ರಾಮಸ್ಥರು ಸುಮಾರು ಹತ್ತು ವರ್ಷಗಳಿಂದ ಮನೆಕಟ್ಟಿಕೊಂಡು ವಾಸವಾಗಿದ್ದಾರೆ ಇವರು ಬಹುತೇಕ ಕೃಷಿ ಕಾರ್ಮಿಕರು.

1980ರಲ್ಲಿ ಆಗಿನ ಸರ್ಕಾರವು ಇವರನ್ನು ಒಕ್ಕಲು ಎಬ್ಬಿಸಲು ಸೂಚನೆ ಪತ್ರವನ್ನು ಕೊಟ್ಟಿದ್ದರು. ಆಗ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಆಗಿನ ಮುಖ್ಯಮಂತ್ರಿಗಳಿಗೆ ಒಕ್ಕಲೆಬ್ಬಿಸುವುದನ್ನು ನಿಲ್ಲಿಸುವಂತೆ ಮನವಿಮಾಡಲಾಗಿತ್ತು. ಅದಕ್ಕೆ ಮನ್ನಣೆ ಇತ್ತ ಸರ್ಕಾರ ಒಕ್ಕಲೆಬ್ಬಿಸುವುದನ್ನು ನಿಲ್ಲಿಸಿದ್ದರು.

ಆದರೆ ಈಗ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪುನಃ ಮಾವು ಕುಟ್ಟ ರೇಂಜ್‌ನ ಅರಣ್ಯ ಅಧಿಕಾರಿಗಳು ಒಕ್ಕಲು ಎಬ್ಬಿಸಲು ಸೂಚನೆ ಪತ್ರ ಕೊಟ್ಟಿದ್ದಾರೆ. ಸೂಚನೆ ಕೊಟ್ಟ 15 ದಿನದ ಒಳಗಾಗಿ ಸ್ಥಳವನ್ನು ಖಾಲಿ ಮಾಡಬೇಕೆಂದು ಅದರಲ್ಲಿ ಸೂಚಿಸಲಾಗಿದೆ. ಇದನ್ನು ವಿರೋಧಿಸಿ, ಒಕ್ಕಲೆಬ್ಬಿಸುವುದನ್ನು ನಿಲ್ಲಿಸಿ ಅವರಿಗೆ ಪಟ್ಟ ಕೊಡಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘವು ಮುಖ್ಯಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರ ಕೊಟ್ಟಿದೆ.

ರಾಯಚೂರು

ರೈತ ಸಂಘದ ಸಭೆ

ಕರ್ನಾಟಕ ಪ್ರಾಂತ ರೈತ ಸಂಘ, ರಾಯಚೂರು ಜಿಲ್ಲಾ ಸಮಿತಿಯ 1984-85ನೇ ಮೊದಲನೇ ಸಭೆ 22-5-84ರಂದು ಮಾನ್ವಿ ರೈತ ಭವನದಲ್ಲಿ ಸೇರಿತ್ತು. ಕಾ. ರಾಮನಗೌಡ ಅವರು ಅಧ್ಯಕ್ಷತೆ ವಹಿಸಿದ್ದರು. ಚಂದ್ರಶೇಖರ ಬಾಳೆ, ಹೊಸ ವರ್ಷದ ಮೊದಲನೇ ಸಭೆಗೆ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು.

ಜಿಲ್ಲಾದ್ಯಂತ ಹೋರಾಟವನ್ನು ಬೆಳೆಸಿ ಸಂಘಟನೆಯನ್ನು ಗಟ್ಟಿಗೊಳಿಸಲು ಮುಖ್ಯ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

ತಾಲ್ಲೂಕ್ ಸಮಾವೇಶಗಳನ್ನು ನಡೆಸಿ ತಾಲ್ಲೂಕ್ ಸಮಿತಿಗಳನ್ನು ಚುನಾಯಿಸಲು ತೀರ್ಮಾನಿಸಿ, ಚುನಾಯಿತ ಜಿಲ್ಲಾ ತಾಲ್ಲೂಕ್ ಸಮಿತಿ ಸದಸ್ಯರನ್ನೂ ಜುಲೈದಲ್ಲಿ ಸೇರಿಸಿ ಜಿಲ್ಲಾ ಸಮಾವೇಶವನ್ನು, ಜಿಲ್ಲೆಯ ರಾಜಕೀಯ ಆರ್ಥಿಕ, ಸಾಮಾಜಿಕ, ಸಂಘಟನಾತ್ಮಕ ಕರಡು ವರದಿಯನ್ನು ಮಂಡಿಸಿ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ಹೊಸಜಿಲ್ಲಾ ಸಮಿತಿಯನ್ನು ಚುನಾಯಿಸಬೇಕೆಂದು ತೀರ್ಮಾನಿಸಲಾಯಿತು.

1983 - 84 ನೇ ವರ್ಷಕ್ಕಾಗಿ 15000/ ಸದಸ್ಯತ್ವವನ್ನು ನೊಂದಾಯಿಸಿದ್ದು, ಇದು ಅತೀ ಕಡಿಮೆ ಸಂಖ್ಯೆಯಾಗಿದ್ದು 84 - 85ನೇ ವರ್ಷಕ್ಕಾಗಿ ದೊಡ್ಡ ಸಂಖ್ಯೆಯಲ್ಲಿ ಸದಸ್ಯತ್ವ ಚಳುವಳಿಯನ್ನು ಮಾಡಲು ವಿಚಾರಿಸಿ ಬೆಳೆಯುತ್ತಿರುವ ಸಂಘಟನೆಯನ್ನು ವ್ಯವಸ್ಥಿತವಾಗಿ ನಡೆಸಲು ಸಹಾಯವಾಗುವಂತೆ 20000/ರೂ ನಿಧಿ ಸಂಗ್ರಹಣೆ ನಡೆದಿದು ಎಂಟು ಜನ ಪೂರ್ಣಾವಧಿ ಕಾರ್ಯಕರ್ತರನ್ನು ಘೋಷಿಸಲಾಯಿತು.

ಕೊನೆಯಲ್ಲಿ ಕಾ. ಆರ್. ಬಸವರಾಜ ಧನ್ಯವಾದಗಳನ್ನು ಸಲ್ಲಿಸಿದರು.

ಎ. ಕೆ. ಗೋಪಾಲನ್ ಭವನ ನಿಧಿಗೆ

ಸಹಾಯ ಮಾಡಿರಿ

ನಿಧಿ ಕೂಡಿಸುವ ಕಾರ್ಯ ಕಾರ್ಮಿಕ ವರ್ಗದ ಪಕ್ಷದ ರಾಜಕೀಯ ಮತ್ತು ಸಂಘಟನಾತ್ಮಕ ಚಟುವಟಿಕೆಯ ಒಂದು ಅಂಗವಾಗಿದೆ. ಪಾರ್ಟಿ ಬೆಳವಣಿಗೆಯ ಶುರುವಿನಲ್ಲಿ, ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯಕರ್ತರು ಜನರ ಮಧ್ಯೆ ಕುಳಿತು ಪ್ರತಿಯೊಂದು ಪ್ರಶ್ನೆಯ ಕುರಿತು ಪಾರ್ಟಿಯ ನಿಲುವನ್ನೂ, ರಾಜಕೀಯ ಪರಿಸ್ಥಿತಿಯನ್ನೂ ಬಹಳಷ್ಟು ಸಮಯ ತಿಳಿಸಿ ಹೇಳುತ್ತಿದ್ದರು. ಬಹಳಷ್ಟು ನಿಧಿ ಕೂಡಿಸಲು ಸಾಧ್ಯವಾಗದಿದ್ದರೂ ಆ ರೀತಿ ನಿಧಿ ಕೂಡಿಸುವ ಕ್ರಮದಿಂದಾಗಿ ಬೇರೆ ಬೇರೆ ವರ್ಗದ ಜನರನ್ನು ಭೇಟಿಯಾಗುವ, ದೇಶದಲ್ಲಿಯ ಆರ್ಥಿಕ – ರಾಜಕೀಯ ಪರಿಸ್ಥಿತಿಯ ಕುರಿತು ಅವರ ಅಭಿಪ್ರಾಯ ತಿಳಿದು ಕೊಳ್ಳುವ ಅವಕಾಶ ಲಭ್ಯವಾಗುತ್ತಿತ್ತು.

“ಜನತೆಯ ಸಲುವಾಗಿ” ಎಂಬ ತಮ್ಮ ಪುಸ್ತಕದಲ್ಲಿ ತಾವು ಯಾವ ರೀತಿ ನಿಧಿ ಕೂಡಿಸುತ್ತಿದ್ದೆವೆಂಬುದರ ಕುರಿತು ನೂರಾರು ಉದಾಹರಣೆಗಳನ್ನು ಉಲ್ಲೇಖಿಸಿದ್ದಾರೆ. ಹಿಂದೆ ಅವರು ಕಾಂಗ್ರೆಸ್ ಸೋಶಲಿಸ್ಟ ಪಾರ್ಟಿಯಲ್ಲಿದ್ದಾಗ, ಆ ಪಕ್ಷದ ಮಳೆಯಾಳಂ ವಾರ ಪತ್ರಿಕೆಗಾಗಿ ಹಣ ಕೂಡಿಸಲು ಮಲಯದಲ್ಲಿ ಕೇರಳದವರೇ ಹೆಚ್ಚಾಗಿರುವ ಒಂದು ರಬ್ಬರ ತೋಟಕ್ಕೆ ಹೊರಟಾಗ ಅವರ ಮೇಲೆ ಪ್ರತಿಬಂಧ ಹೇರಲಾಯಿತು. ಎ.ಕೆ.ಜಿಯವರು ಅಲ್ಲಿಗೆ ಯಾವ ಉದ್ದೇಶಕ್ಕಾಗಿ ಬಂದಿದ್ದಾರೆಂಬ ವಿಷಯ ಆ ಪ್ರದೇಶದಲ್ಲಿಯ ಸಂಗಾತಿಗಳಿಗೆ ತಿಳಿದಿತ್ತು. ರಾಜಕೀಯ ಸಭೆಗಳ ಮೇಲಿನ ಪ್ರತಿಬಂಧಕಾಜ್ಞೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಭಾರತದ ಒಬ್ಬ ಪ್ರಸಿದ್ಧ ಗಾಯಕನಿಂದ ಸಂಗೀತ ಕಾರ್ಯಕ್ರಮ ಏರ್ಪಡಿಸಿದರು. ನಿರ್ದಿಷ್ಟ ಸಮಯದಲ್ಲಿ ಎ.ಕೆ.ಜಿಯವರು ಸ್ಟೇಜಿನ ಮೇಲೆ ಕಾಣಿಸಿಕೊಂಡರು.

ದೇಶದಲ್ಲಿ ಕಾರ್ಮಿಕ ವರ್ಗದ ಚಳುವಳಿ ಬಾಲ್ಯಾವಸ್ಥೆಯಲ್ಲಿದ್ದ 1930ರ ಕಾಲ ಘಟ್ಟದಲ್ಲಿ ಅಂಥ ಘಟನೆಗಳು ನಡೆದಿವೆ. ಆದರೆ ಕಳೆದ 50 ವರ್ಷಗಳಲ್ಲಿ ಎಡ ಹಾಗೂ ಮಾರ್ಕ್ಸವಾದಿ ಕಮ್ಯೂನಿಸ್ಟ ಪಕ್ಷ ಅದರ ಸಾಮೂಹಿಕ ಸಂಘಟನೆಗಳೊಂದಿಗೆ ಬಲಿಷ್ಠವಾಗಿ ಬೆಳೆದು ಬಂದಿದೆ. ಸಾಮಾಜಿಕ - ಆರ್ಥಿಕ ಸಮಾನತೆಯ ಸಲುವಾಗಿ ಹೋರಾಡಲು ಜನತೆಯ ಕೈಯ್ಯಲ್ಲಿ ಅದೊಂದು ಪ್ರಬಲ ಅಸ್ತ್ರವಾಗಿದೆ. ದೇಶದ ಪ್ರತಿಯೊಂದು ಮೂಲೆಯಲ್ಲೂ ಕೆಂಬಾವುಟವನ್ನು ಗುರ್ತಿಸಲಾಗುತ್ತಿದೆ. ಅದು ತಮ್ಮದೇ ಧ್ವಜವೆಂದೂ, ತನ್ನ ಪಕ್ಷದ ಧ್ವಜವೆಂದೂ ದುಡಿಯುವ ಕಾರ್ಮಿಕ ವರ್ಗ ಅರಿತಿದೆ.

ಶೋಷಿತ ಜನತೆಗಾಗಿ, ದುಡಿಯುವ ಜನತೆಯ ರಾಜಕೀಯ ಪಕ್ಷಕ್ಕಾಗಿ ಜೀವನವನ್ನು ಮೀಸಲಾಗಿಟ್ಟ ಎ. ಕೆ. ಗೋಪಾಲನ್ ಅವರ ಹೆಸರಿನಲ್ಲೇ ದಿಲ್ಲಿಯಲ್ಲಿ ಭವನ ಕಟ್ಟಿ, ಪಾರ್ಟಿಯ ಕೇಂದ್ರ ಸಮಿತಿಯ ಭದ್ರನೆಲೆಯನ್ನಾಗಿ ಮಾಡಬೇಕೆಂಬ ಕಾರಣದಿಂದಲೇ ಎ. ಕೆ. ಜಿ. ಭವನ ನಿಧಿಗೆ ಎಲ್ಲ ಪಾರ್ಟಿ ಸದಸ್ಯರೂ, ಸಾಮೂಹಿಕ ಸಂಘಟನೆಗಳೂ ಉದಾರ ಹಸ್ತದಿಂದ ಧನ ಸಹಾಯ ಮಾಡಬೇಕೆಂದು ಕೇಳಿ ಕೊಳ್ಳುತ್ತೇವೆ. ಈ ಹಣವನ್ನು ಕರ್ನಾಟಕ ರಾಜ್ಯ ಸಮಿತಿಗಾಗಲೀ, ಅಥವಾ ಎ. ಕೆ. ಗೋಪಾಲನ್ ಭವನ್ ಟ್ರಸ್ಟ್, 14, ಅಶೋಕ ರೋಡ್, ನ್ಯೂಡೆಲ್ಲಿಗಾಗಲೀ ಕಳುಹಿಸಬೇಕೆಂದು ವಿನಂತಿ.

[1ನೇ ಪುಟದಿಂದ]

ಗುಂಡುರಾವ್ ಸರಕಾರಕ್ಕೆ ಹೋಲಿಸಿದರೆ ಕಾನೂನು ಮತ್ತು ಶಾಂತಿ ಪಾಲನೆಯ ಮಟ್ಟಿಗೆ ಜನತಾ ಸರಕಾರ ನಿಜವಾಗಿಯೂ ಶಾಂತಿಯುತ ಚಳುವಳಿಯಲ್ಲಿ ಪೋಲೀಸರ ಮಧ್ಯ ಪ್ರವೇಶಕ್ಕೆ ಅವಕಾಶ ಮಾಡಿಕೊಡುವುದಿಲ್ಲವೆಂಬ ಸಂಗತಿ ಎಲ್ಲರಿಗೂ ತಿಳಿದದ್ದೇ. ಮೊನ್ನೆಯವರೆಗೆ ಈ ವಿಷಯದ ಕುರಿತು ಶಾಸನ ಸಭೆಯಲ್ಲಿ ಸಾಕಷ್ಟು ಮಾತಾಡಿ ದಣಿದ ವೀರಪ್ಪ ಮೊಯಿಲಿಯವರು ಮದ್ದೂರು ಚುನಾವಣೆಯಲ್ಲಿ ಜನತಾಪಕ್ಷ ಸೋತಿರುವುದನ್ನು ಉಪಯೋಗಿಸಿಕೊಂಡು ಶಾಸಕರಲ್ಲೂ ಜನರಲ್ಲೂ ಜನತಾ ಪಕ್ಷದ ಆಡಳಿತೆಯಿಂದಾಗಿ ಉಂಟಾಗಿರುವ ಅಸಮಾಧಾನಕ್ಕೆ ಪ್ರಚೋದನೆ ಕೊಟ್ಟು ಅದರಿಂದ ಲಾಭ ಪಡೆಯುವ ಹೊಂಚು ಹಾಕುತ್ತಿದ್ದಾರೆ. ಆದರೆ ಜನತೆ ಮಾತ್ರ ಇವರ ಸಂಚಿಗೆ, ಪ್ರಚಾರಕ್ಕೆ ಬಲಿಯಾಗುವುದಿಲ್ಲ, ಅವರು ಮತ್ತೊಮ್ಮೆ ಅಧಿಕಾರಕ್ಕೆ ಬರುವಂತೆ ಬಿಡುವುದಿಲ್ಲವೆಂಬುದನ್ನು ತಿಳಿದು ಕೊಳ್ಳುವುದಗತ್ಯ.

ಸಿಐಟಿಯು ಸಮ್ಮೇಳನದ ನಿರ್ಣಯ

ಬೀಡಿ ಕಾರ್ಮಿಕರ ಬೇಡಿಕೆಗಳ ಕುರಿತು

ಕರ್ನಾಟಕ ರಾಜ್ಯದಲ್ಲಿ ಸುಮಾರು 6 ಲಕ್ಷ ಬೀಡಿ ಕಾರ್ಮಿಕರು ಕೆಲಸ ಮಾಡುತ್ತಿದ್ದು, ಈ ಕೈಗಾರಿಕೆಯಲ್ಲಿರುವ ಹಲವಾರು ಕಾನೂನು ಬಾಹಿರ ವ್ಯವಸ್ಥೆಗಳಿಂದಾಗಿ, ಕಾನೂನು ಪ್ರಕಾರ ಸಲ್ಲತಕ್ಕ ಕನಿಷ್ಟ ಸವಲತ್ತುಗಳಿಂದ ಇವರು ವಂಚಿತರಾಗಿರುತ್ತಾರೆ. ಕಂಟ್ರಾಕ್ಟ್ ಪದ್ಧತಿಯಿಂದಾಗಿ ಕಾರ್ಮಿಕರು ಹಲವು ರೀತಿಯ ಸುಲಿಗೆ, ಶೋಷಣೆಗಳಿಗೆ ಒಳಗಾಗಿದ್ದಾರೆ. ಬೀಡಿ ಕಾರ್ಮಿಕರ ಸಮಸ್ಯೆಗಳನ್ನು ವಿವರವಾಗಿ ಚರ್ಚಿಸಿದ ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ನಾಲ್ಕನೆಯ ಸಮ್ಮೇಳನವು ಈ ಕೆಳಗಿನ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯವ್ಯಾಪೀ ಹೋರಾಟ ನಡೆಸುವಂತೆ ಬೀಡಿ ಕಾರ್ಮಿಕರಿಗೆ ಕರೆ ನೀಡುತ್ತದೆ.

1. ಬೀಡಿ ಕೈಗಾರಿಕೆಯಲ್ಲಿ ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕು.

2. ಬೀಡಿ ಕಾರ್ಮಿಕರು ತಮ್ಮ ಮನೆಗಳಲ್ಲಿ ಅಥವಾ ಎಲ್ಲೇ ಬೀಡಿ ಕೆಲಸ ಮಾಡುತ್ತಿದ್ದರೂ ಅವರು ಆಯಾ ಬೀಡಿ ತಯಾರಿಕೆದಾರರ ಕಾರ್ಮಿಕರೆಂದು ಪರಿಗಣಿಸಲ್ಪಡಬೇಕು ಮತ್ತು ಎಲ್ಲಾ ಕಾರ್ಮಿಕ ಕಾನೂನುಗಳ ಸವಲತ್ತುಗಳು ಅವರಿಗೆ ಸಿಗುವಂತಾಗಲಿ ಈ ಸಂಬಂಧಪಟ್ಟ ಕಾನೂನುಗಳನ್ನು ತಿದ್ದುಪಡಿ ಮಾಡಬೇಕು.

3. ಬೀಡಿ ಕಾರ್ಮಿಕರಿಗೆ ಸಂಬಳ ಸಮೇತ ವಾರದ ರಜೆ ಸಿಗಬೇಕು.

4. ಕರ್ನಾಟಕ ಸರ್ಕಾರವು ಘೋಷಿಸಿರುವ ಮೇ ದಿನದ ರಜೆಯನ್ನು ಬೀಡಿ ಕಾರ್ಮಿಕರಿಗೆ ಸಂಬಳ ಸಮೇತ ರಜೆಯಾಗಿ ಕೊಡಬೇಕು.

5. ಲೇಬಲ್ ಇಲ್ಲದ ಬೀಡಿ ತಯಾರಿಕೆಗೆ ಈಗ ಇರುವ ರಿಯಾಯಿತಿ ರದ್ದಾಗಬೇಕು. ಟ್ರೇಡ್ ಮಾರ್ಕ ಹೊಂದಿರುವವರಿಗೆ ಮಾತ್ರವೇ ಬೀಡಿ ತಯಾರಿಕೆಯ ಲೈಸನ್ಸ್ ಕೊಡಬೇಕು.

6. ಬೀಡಿ ಕಾರ್ಮಿಕರ ಕ್ಷೇಮ ನಿಧಿಯಿಂದ ನಡೆಸುವ ಸುಸಜ್ಜಿತ, ಸುವ್ಯವಸ್ಥಿತ ಸಂಚಾರಿ ಆಸ್ಪತ್ರೆಗಳು ರಾಜ್ಯದಾದ್ಯಂತ ವ್ಯವಸ್ಥೆ ಆಗಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರುವರೆ ಲಕ್ಷ ಬೀಡಿ ಕಾರ್ಮಿಕರಿದ್ದು ಇಲ್ಲಿನ ಕಾರ್ಮಿಕರಿಗೆ ಅನುಕೂಲವಾಗುವಂತೆ ಒಂದು ನೂರು ಹಾಸಿಗೆಗಳ ಆಸ್ಪತ್ರೆಯೊಂದನ್ನು ಮಂಗಳೂರಿನಲ್ಲಿ ತೆರೆಯಬೇಕು.

7. ಎಲ್ಲಾ ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಬೇಕು. ಕನಿಷ್ಠ ಅಂಕಗಳ ಮಿತಿ ಮತ್ತು ಆದಾಯದ ಮಿತಿಯನ್ನು ಹೇರಕೂಡದು.

8 ಬೀಡಿ ಕಾರ್ಮಿಕರಿಗೆ ಉಚಿತವಾಗಿ ಮನೆ ನಿವೇಶನ ಒದಗಿಸಬೇಕು. ಮತ್ತು ಮನೆಕಟ್ಟಲು ಸಾಲ ಕೊಡಬೇಕು.

ಈ ಬೇಡಿಕೆಗಳನ್ನು ಕುರಿತು ಒತ್ತಾಯ ಮಾಡುವ ಸಲುವಾಗಿ ಜೂನ್ 11 ಕ್ಕೆ ತೀವ್ರ ಹೋರಾಟಕ್ಕೆ ಬೀಡಿ ಕಾರ್ಮಿಕರಿಗೆ ಕರೆಕೊಡುತ್ತದೆ.

(1ನೆ ಪುಟದಿಂದ)

ಇಂಥ ಅಪಪ್ರಚಾರದ ಲಾಭವನ್ನು ಪಡೆಯಲು ಕಾಂಗ್ರೆಸ್ ಮುಖಂಡರು ತುದಿಗಾಲ ಮೇಲೆ ನಿಂತಿದ್ದಾರೆ. ಯಾವುದೇ ನಿಷ್ಠೆ, ಸಿದ್ಧಾಂತಗಳಿಲ್ಲದ ಅಧಿಕಾರ ಪಡೆಯುವುದೇ ಮೂಲಗುರಿಯಾಗುಳ್ಳ ಶಾಸಕರೂ, ಮುಖಂಡರೂ ಕಾರ್ಯಕರ್ತರೂ ಜನತಾ ಪಾರ್ಟಿಯಲ್ಲಿ ಸಾಕಷ್ಟು ತುಂಬಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಹೆಗಡೆ ಸರಕಾರ ಅತ್ಯಂತ ದೂರ ದೃಷ್ಟಿಯಿಂದ, ಎಚ್ಚರಿಕೆಯಿಂದ ಕೆಲಸ ಮಾಡಬೇಕು. ರೈತರ ಕೃಷಿ ಕಾರ್ಮಿಕರ, ದುಡಿಯುವ ಜನತೆಯ ವಿಶ್ವಾಸಗಳಿಸಬೇಕು.

ಹಾಗಾಗ ಬೇಕಾದರೆ ಪ್ರಾಂತ ರೈತ ಸಂಘ ಸಲ್ಲಿಸಿದ ಬೇಡಿಕೆಗಳ ಕುರಿತು ಚರ್ಚಿಸಿ, ಅವುಗಳಿಗೆ ಸಕಾಲದಲ್ಲಿ ಪರಿಹಾರ ಒದಗಿಸಬೇಕು. ರೈತರಿಗೆ, ಕೃಷಿ ಕಾರ್ಮಿಕರಿಗೆ ಒತ್ತುವರಿ ಭೂಮಿಯ ಪಟ್ಟಾ ಕೊಡಬೇಕು. ದರಖಾಸ್ತುದಾರರಿಗೂ, ನಿವೇಶನ ರಹಿತರಿಗೆ ಮನೆ ಒದಗಿಸಿ ಕೊಡಬೇಕು. ಹೆಗಡೆ ಸರಕಾರ ಪ್ರಾಂತ ರೈತ ಸಂಘದ ಮುಖಂಡರನ್ನು ಕರೆಸಿ ಈ ಸಮಸ್ಯೆಗಳನ್ನು ತಾ 11 ರೊಳಗಾಗಿ ಯಾಕೆ ಬಗೆಹರಿಸಬಾರದೆಂಬ ಪ್ರಶ್ನೆಯನ್ನು ಹಾಕಿದ್ದಾರೆ. ಸಿ. ಐ. ಟಿ. ಯು. ಅಧ್ಯಕ್ಷರೂ ಮಾರ್ಕ್ಸವಾದಿ ಕಮ್ಯುನಿಸ್ಟ ಪಾರ್ಟಿಯ ಪಾಲಿಟ್ ಬ್ಯೂರೋ ಸದಸ್ಯರಾದ ಕಾ. ಬಿ. ಟಿ. ರಣದಿವೆಯವರು ಮಂಗಳೂರಿನ ಸಾರ್ವಜನಿಕ ಸಭೆಯಲ್ಲಿ.

ಜನರ ಸಮಸ್ಯೆ ಬಗೆಹರಿಯ ಬೇಕು, ತನ್ನ ಸರಕಾರ ಭದ್ರವಾಗುಳಿಯಬೇಕೆಂಬ ಇಚ್ಛೆ ಹೆಗಡೆಯವರಿಗಿದ್ದರೆ ಅವರು ಪ್ರಾಂತ ರೈತ ಸಂಘದ ಬೇಡಿಕೆಗಳನ್ನು ಕೂಡಲೇ ಮಾನ್ಯ ಮಾಡುವುದು ಅತ್ಯಗತ್ಯ.

ಕಾರ್ಮಿಕರು ತಮ್ಮ ತುರ್ತಿನ ಗುರಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಸಾಧಿಸಬೇಕಾದರೆ ಮಧ್ಯಮ ಬಡ ರೈತರ ಕೃಷಿ, ಕಾರ್ಮಿಕರ ಬೆಂಬಲ ಅಗತ್ಯ. ಆದ್ದರಿಂದಲೇ ಜೂನ್ 11ರ ಪಿಕೆಟಿಂಗ್–ಸತ್ಯಾಗ್ರಹದಲ್ಲಿ ಕಾರ್ಮಿಕ ವರ್ಗ ಸಕ್ರಿಯವಾಗಿ ಭಾಗವಹಿಸಲು ನಿರ್ಣಯಿಸಿರುವುದು ಸ್ವಾಗತಾರ್ಹ.

ಮಾರ್ಕ್ಸವಾದಿ ಕಮ್ಯೂನಿಸ್ಟ ಪಾರ್ಟಿ ಹಾಗೆಯೇ ವಿದ್ಯಾರ್ಥಿ ಯುವಜನ ಸಂಘಟನೆಗಳೂ ರೈತರ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲ ನೀಡಿವೆ.

ಜೂನ್ 11 ರ ರೈತರ ಬೇಡಿಕೆ ದಿನಾಚರಣೆ ಯಶಸ್ವಿಯಾಗಲಿ ! ರೈತ ಕಾರ್ಮಿಕರ ಐಕ್ಯತೆ ಬಲಗೊಳ್ಳಲಿ ! ರೈತರ ಬೇಡಿಕೆಗಳೆಲ್ಲ ಮನ್ನಿಸಲ್ಪಡಲಿ ಎಂದು ಹಾರೈಸುತ್ತೇವೆ.

ದಯವಿಟ್ಟು ಗಮನಿಸಿ

ಐಕ್ಯರಂಗಕ್ಕೆ ಪತ್ರಗಳು, ವರದಿಗಳು, ಮನಿಯಾರ್ಡರುಗಳು ಮತ್ತು ಚೆಕ್‌ಗಳನ್ನು ಕಳುಹಿಸುವವರು ವೈಯಕ್ತಿಕ ಹೆಸರಿನಲ್ಲಿ ಕಳುಹಿಸಬಾರದೆಂದು ಕೋರುತ್ತೇವೆ.

ಸಂಪಾದಕರು, "ಐಕ್ಯರಂಗ" ವಾರಪತ್ರಿಕೆ, ಎಲ್-56, ಕೆ. ವಿ. ಟೆಂಪಲ್ ಬೀದಿ, ಸುಲ್ತಾನ್ ಪೇಟೆ, ಬೆಂಗಳೂರು - 560 053 ಈ ವಿಳಾಸಕ್ಕೇ ಕಳುಹಿಸಬೇಕು.

ವರದಿಗಳನ್ನು, ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸ್ಪುಟವಾಗಿ ಬರೆದು ಸರಿಯಾದ ಪ್ರಮಾಣದಲ್ಲಿ ಅಂಚೆ ಚೀಟಿಗಳನ್ನು ಅಂಟಿಸಿ ಕಳುಹಿಸಬೇಕು.

ಐಕ್ಯರಂಗದ ಏಜೆಂಟರುಗಳಿಗೆ ತಿಂಗಳ ಕೊನೆಯ ಸಂಚಿಕೆಯೊಂದಿಗೆ ಬಿಲ್ ಕಳುಹಿಸುತ್ತಿದ್ದೇವೆ. ಅನೇಕ ಏಜೆಂಟರುಗಳು ಇನ್ನೂ ಬಿಲ್ ಪಾವತಿ ಮಾಡಿಲ್ಲ ಅಂಥವರ ಏಜೆನ್ಸಿಗಳು ರದ್ದಾಗುವ ಸಂಭವವಿದೆ. ಪತ್ರಿಕೆಯ ಪರಿಸ್ಥಿತಿಯನ್ನು ಅರಿತು ನಮ್ಮೊಡನೆ ಸಹಕರಿಸಬೇಕೆಂದು ವಿನಂತಿಸುತ್ತೇವೆ.

ವ್ಯವಸ್ಥಾಪಕ

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K. V. Temple Street, Sultanpet. B-53. Phone : 24154
Editor : P. Ramachandra Rao Managing Editor : N. K. Upadhyaya